# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 291 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 29.05.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 291 • PRGI No:KARKAN/2023/88055 • VIJAYANAGARA • 29.05.2025 • Thursday • Page:04 • Rs:2



HAMPI TIMES
PRINT & DIGITAL
Daily NEWS PAPER
To book Classified Display Ad in HAMPI TIMES Please call on
9448633038
Bring your product to local hearts




> ಮನಸ್ಸು ಎಲ್ಲದಕ್ಕೂ ಮೂಲ,
> ಅದನ್ನು ಸರಿಪಡಿಸಿಕೊಳ್ಳದ ಹೊರತು
> ಇನ್ನಾವುದು ಸರಿಯಾಗದು
> – ಡಿ.ವಿ.ಜಿ

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಮೈಕ್ರೋ ನ್ಯೂಸ್


### ಜೂ.2 ಹರಪನಹಳ್ಳಿಯಲ್ಲಿ ಜನಸ್ಪಂದನ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಹರಪನಹಳ್ಳಿ ತಾಲೂಕಿನ ಅರಸೀಕೆರೆಯ ಶ್ರೀಕೋಲಶಾಂತೇಶ್ವರ ಮಠದಲ್ಲಿ ಜೂ.2 ರಂದು, ಬೆಳಗ್ಗೆ 10 ಗಂಟೆಗೆ, ಜಗಳೂರು ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ತಾಲೂಕು ಮಟ್ಟದ ಜನಸ್ಪಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಜನಸ್ಪಂದನಾ ಕಾರ್ಯಕ್ರಮ ಸರ್ಕಾರದ ನಿರ್ದೇಶನದಂತೆ ಜಿಲ್ಲೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಾರ್ವಜನಿಕರು ತಮ್ಮ ಅಹವಾಲುಗಳು ಇದ್ದಲ್ಲಿ ಸಭೆಯಲ್ಲಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

## ಆನಂದ ಬಾಣ





Classifide / Display ADS
Contact:
94486 33038


# ಖಾಸಗಿ ಶಾಲೆಗಳು ವಿದ್ಯಾದಾನ ದೇಗುಲಗಳಾಗಲಿ ಮಾರಾಟದ ಕೇಂದ್ರಗಳಾದರೆ ಸೂಕ್ತ ಕ್ರಮ ನಿಶ್ಚಿತ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಖಡಕ್ ವಾರ್ನಿಂಗ್ | ಬುಕ್ ಡ್ರೆಸ್ ಬ್ಯಾಗ್ ಶೂ ಮಾರಾಟ ಸಲ್ಲದು

## 15 ವರ್ಷ ಮೀರಿದ ಶಾಲಾ ವಾಹನಗಳು ಬಳಸಿದರೇ ಶಾಲೆ ವಿರುದ್ಧ ಎಫ್ಐಆರ್ ದಾಖಲು





**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಎಲ್ಲಾ ಖಾಸಗಿ ಶಾಲೆಗಳು ಡಿಸೆಂಬರ್ ಕೊನೆಯೊಳಗೆ ಶಾಲಾ ಶುಲ್ಕ ಘೋಷಿಸಿಕೊಳ್ಳಬೇಕಿದೆ. ಆದರೆ ಈವರೆಗೂ ಬಹುತೇಕ ಶಾಲೆಗಳು ಮಾಹಿತಿ ಪ್ರಕಟಿಸಿಲ್ಲ. ಜೂ.5 ರೊಳಗೆ ಶಾಲಾ ಶುಲ್ಕ ಘೋಷಣೆಗೆ ಗಡುವು ನೀಡಲಾಗಿದ್ದು, ನಿರ್ಲಕ್ಷಿಸಿದರೇ ಅಂತಹ ಶಾಲೆಗಳ ಮಾಹಿತಿಯನ್ನು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ ಏರ್ಪಡಿಸಿದ್ದ ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿಗಳ ಸಭೆ ಅಧ್ಯಕ್ಷತೆವಹಿಸಿ ಬುಧವಾರ ಮಾತನಾಡಿದರು. ಜಿಲ್ಲೆಯಲ್ಲಿ ಒಟ್ಟು 1612 ಶಾಲೆಗಳಿವೆ. ಅದರಲ್ಲಿ ಶೇ.25 ರಷ್ಟು ಅಂದರೆ 406 ಶಾಲೆಗಳು ಅನುದಾನ ರಹಿತ ಶಾಲೆಗಳಿವೆ. 16 ಸಿಬಿಎಸ್‌ಇ, 3 ಐಸಿಎಸ್‌ಇ ಶಾಲೆಗಳಿವೆ. ಜಿಲ್ಲೆಯ ಯಾವುದೇ ಶಾಲೆಗಳು ಹೆಚ್ಚುವರಿ ಶುಲ್ಕ ಸಂಗ್ರಹಿಸಿದರೇ ಮುಲಾಜಿಲ್ಲದೇ ನಿಯಮಾನುಸಾರ ಶಿಸ್ತುಕ್ರಮ ವಹಿಸಲಾಗುವುದು, ಎಲ್ಲಾ ಶಾಲೆಗಳ ಸೂಚನಾ ಫಲಕಗಳಲ್ಲಿ ಶುಲ್ಕದ ವಿವರವನ್ನು ಪ್ರದರ್ಶಿಸಬೇಕು. ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ 15 ವರ್ಷ ಮೀರಿದ 112 ಶಾಲಾ ವಾಹನಗಳಿವೆ ಎಂದು ವರದಿ ಇದೆ. ಆರ್‌ಟಿಓ ಪರವಾನಿಗೆ, ವಿಮೆ ಇಲ್ಲದೇ ಶಾಲಾ ವಾಹನಗಳನ್ನು ಬಳಸುವಂತಿಲ್ಲ. ಜೂ.5 ರೊಳಗೆ ಎಲ್ಲಾ ಬಿಇಓ ಗಳು ಶಾಲೆಗಳಿಗೆ ಭೇಟಿ ನೀಡಿ ವರದಿ ಸಲ್ಲಿಸಬೇಕು. ಖಾಸಗಿ ಶಾಲೆಗಳಲ್ಲಿ ಯುನಿಫಾರ್ಮ್, ಶೂ, ಬ್ಯಾಗ್, ಬುಕ್ಸ್ ಮಾರಾಟ ಮಾಡುವುದು, ಕಡ್ಡಾಯವಾಗಿ ಇಲ್ಲಿಯೇ ಖರೀದಿಸಬೇಕೆಂದು ಒತ್ತಡ ಹೇರಿದ ದೂರುಗಳು ಬಂದರೆ ಅಂತಹ ಶಾಲೆಯ ವಿರುದ್ಧ ಕ್ರಮವಹಿಸಲಾಗುವುದು. ಶಾಲೆಗಳಲ್ಲಿ ಬೋಧಕ ಸಿಬ್ಬಂದಿಗಳಂತೆ ನೈರ್ಮಲ್ಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕು. ಬಹುತೇಕ ಶಾಲೆಗಳು ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ. ಗುಣಮಟ್ಟದ ಶಿಕ್ಷಣ ನೀಡಲು ಮಾನವೀಯತೆ ಅಧಾರದ ಮೇಲೆ ಖಾಸಗಿ ಶಾಲೆಗಳು ಕಾರ್ಯ ನಿರ್ವಹಿಸಬೇಕು ಎಂದರು.

- ಖಾಸಗಿ ಶಿಕ್ಷಣ ಸಂಸ್ಥೆಗಳು ಜೂ.5 ರೊಳಗೆ ಶಾಲಾ ಶುಲ್ಕ ಘೋಷಣೆಗೆ ಗಡುವು
- ಶಾಲೆಗಳಲ್ಲಿ ಮಕ್ಕಳಿಗಿಟ್ಟ ಕುಡಿಯುವ ನೀರನ್ನು ಶಿಕ್ಷಕರು ಕಡಿಯುತ್ತೀರಾ ?
- ಶೌಚಾಲಯಗಳ ಸ್ವಚ್ಛತೆಗೆ ಆದ್ಯತೆ ಇರಲಿ
- ಜಿಲ್ಲೆಯಲ್ಲಿ 1612 ಶಾಲೆಗಳು, 406 ಅನುದಾನ ರಹಿತ, 16 ಸಿಬಿಎಸ್‌ಇ, 3 ಐಸಿಎಸ್ ಶಾಲೆಗಳಿವೆ
- 15 ವರ್ಷ ಮೀರಿದ 112 ಶಾಲಾವಾಹನಗಳಿವೆ

**ವಿದ್ಯಾರ್ಥಿನಿಯರು ನೀರು ಕುಡಿಯಲು ಹಿಂಜರಿಕೆ :** ಅನೇಕ ಶಾಲೆಗಳಲ್ಲಿ ಕುಡಿಯುವ ನೀರನ್ನು ಬಳಸದ ದುಸ್ಥಿತಿಯಲ್ಲಿ ನೀರಿನ ಅವ್ಯವಸ್ಥೆ ಇದೆ. ವಿದ್ಯಾರ್ಥಿಗಳು ಮನೆಯಿಂದಲೇ ಕುಡಿಯುವ ನೀರು ತರುತ್ತಿದ್ದಾರೆ. ಆದರೆ ವಿದ್ಯಾರ್ಥಿನಿಯರು ಶಾಲೆಯಲ್ಲಿರುವ ನೀರು ಕುಡಿಯಲು ಹಿಂಜರಿಯುತ್ತಿದ್ದಾರೆ. ಇದರಿಂದ ಹೆಣ್ಣುಮಕ್ಕಳಿಗೆ ಎಂತಹ ಸಮಸ್ಯೆಗಳು ಉಲ್ಬಣಿಸಲಿವೆ ಎಂಬ ಕನಿಷ್ಠ ಕಾಳಜಿ ಶಾಲಾ ಆಡಳಿತ ಮಂಡಳಿಗಳಿಗೆ ಇದೆಯೇ? ಶೌಚಗೃಹ ಅವ್ಯವಸ್ಥೆಯನ್ನು ಸರಿಪಡಿಸಿ. ನೈರ್ಮಲ್ಯತೆಗೆ ಆದ್ಯತೆ ನೀಡಬೇಕೆಂದು ಖಡಕ್ ಸೂಚನೆ ನೀಡಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ವೆಂಕಟೇಶ ರಾಮಚಂದ್ರಪ್ಪ ಮಾತನಾಡಿ, ಜಿಲ್ಲಾ ಮಟ್ಟದ ಶಿಕ್ಷಣ ನಿಯಂತ್ರಣ ಪ್ರಾಧಿಕಾರ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಅನಧಿಕೃತ ಶಾಲೆಗಳು, ಶಾಲೆಗಳಲ್ಲಿ ಅನಧಿಕೃತ ಮಾಧ್ಯಮ ನಿರ್ವಹಣೆ, ಅನಧಿಕೃತ ಪಠ್ಯಕ್ರಮ ಪಾಲನೆ, ಅನಧಿಕೃತ ತರಗತಿ, ಶಿಕ್ಷಕರ ಕುರಿತು ದೂರುಗಳು ದಾಖಲಾದರೇ ಅಂತಹ ಶಾಲೆಗಳ ಮಾನ್ಯತೆಯನ್ನು ರದ್ದು ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದೆ. ಶಾಲೆಗಳು ಮಕ್ಕಳ ಶ್ರೇಯೋಭಿವೃದ್ಧಿ ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ಕೆಲಸ ಮಾಡಬೇಕಿದೆ ಎಂದರು.

ಹೊಸಪೇಟೆ ಬಿಇಓ ಶೇಖರಪ್ಪ ಹೊರಪೇಟೆ, ಹಗರಿಬೊಮ್ಮನಹಳ್ಳಿ ಬಿಇಓ ಮೈಲೇಶ್ ಬೇವೂರು, ಕೂಡ್ಲಿಗಿ ಬಿಇಓ ಪದ್ಮನಾಭ ಸೇರಿದಂತೆ ಜಿಲ್ಲೆಯ ವಿವಿಧ ಖಾಸಗಿ ಶಾಲೆಗಳ ಆಡಳಿತ ಮಂಡಳಿಯ ಪ್ರತಿನಿಧಿಗಳು ಭಾಗವಹಿಸಿದ್ದರು.

# ಕೃಷಿ ಭಾಗ್ಯ ಯೋಜನೆಯಡಿ ರೈತರಿಗೆ ಸಹಾಯಧನ

## ಸಹಾಯಕ ಕೃಷಿ ನಿರ್ದೇಶಕ ಎಸ್.ಮನೋಹರಗೌಡ ಹೇಳಿಕೆ | ರೈತಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ

**ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರದ ಹಿಂದಿನ ಅವಧಿಯಲ್ಲಿನ ಅತ್ಯಂತ ಜನಪ್ರಿಯವಾಗಿದ್ದ ಕೃಷಿ ಭಾಗ್ಯ ಯೋಜನೆಯನ್ನು ಮರು ಜಾರಿಗೊಳಿಸಲಾಗಿದೆ. ಅರ್ಹ ರೈತರು ಸಹಾಯಧನ ಪಡೆಯಬಹುದು ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್. ಮನೋಹರಗೌಡ ತಿಳಿಸಿದ್ದಾರೆ.

ಒಣ ಹವಾಮಾನ ವಲಯಗಳು, ಬರ ಪೀಡಿತ ತಾಲೂಕುಗಳಲ್ಲಿ ಮತ್ತು ಗಣಿಗಾರಿಕೆಯಿಂದ ಭಾಧಿತ ಪ್ರದೇಶದಲ್ಲಿ ಸುಸ್ಥಿರ ಕೃಷಿಯನ್ನು ಉತ್ತೇಜಿಸಿ, ಬೆಳೆ ಉತ್ಪಾದಕತೆ ಮತ್ತು ರೈತರ ಜೀವನಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ. ರೈತರ ಜಮೀನುಗಳಲ್ಲಿ ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ಕೃಷಿ ಹೊಂಡ ನಿರ್ಮಾಣ, ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ, ಹೊಂಡದಿಂದ ನೀರು ಎತ್ತಲು ಡಿಸೇಲ್, ಪೆಟ್ರೋಲ್, ಸೋಲಾರ್, ಪಂಪ್‌ಸೆಟ್ ಮತ್ತು ನೀರನ್ನು ಬೆಳೆಗಳಿಗೆ ಹಾಯಿಸಲು ಸೂಕ್ಷ್ಮ ನೀರಾವರಿ( ತುಂತುರು ನೀರಾವರಿ) ಯೋಜನೆಯಡಿ ರೈತರಿಗೆ ಸಹಾಯಧನವನ್ನು ನಿಯಮಾನುಸಾರ ಪಾವತಿಸಲಾಗುತ್ತದೆ. ಆದ್ದರಿಂದ ಜಿಲ್ಲೆಯ ಆಸಕ್ತ ರೈತರು ಮರಿಯಮ್ಮನಹಳ್ಳಿ, ಕಮಲಾಪುರ, ಮತ್ತು ಹೊಸಪೇಟೆಯ ಎಪಿಎಂಸಿ ಆವರಣದಲ್ಲಿರುವ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ಯೋಜನೆಯ ಸೌಲಭ್ಯಗಳನ್ನು ಸದುಪಯೋಗ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಂದುವರೆದ ಪೌರ ಕಾರ್ಮಿಕರ ಮುಷ್ಕರ ರಸ್ತೆಯಲ್ಲಿ ತ್ಯಾಜ್ಯದ ರಾಶಿ




**ಹಂಪಿ ಟೈಮ್ಸ್ ಕೊಟ್ಟೂರು**

ರಾಜ್ಯ ಪೌರ ನೌಕರರು ತಮ್ಮ ವಿವಿಧ ಭೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕೈಗೊಂಡಿರುವ ಅನಿರ್ಧಿಷ್ಟಾವಧಿ ಮುಷ್ಕರದಿಂದ ಪಟ್ಟಣದಲ್ಲಿ ಸಾರ್ವಜನಿಕ ಸ್ಥಳಗಳು ತಿಪ್ಪೆಯಾಗಿ ಮಾರ್ಪಟ್ಟಿವೆ.

ಕೊಟ್ಟೂರು ವ್ಯಾಪಾರ ಕೇಂದ್ರ ಹಾಗೂ ಹೆಚ್ಚಿನ ಜನ ಸಂಖ್ಯೆ ಹೊಂದಿರುವ ಪಟ್ಟಣ ಇಲ್ಲಿ ನಿತ್ಯ 15 ರಿಂದ 20 ಲೋಡ್ ಟ್ರ್ಯಾಕ್ಟರ್ ಕಸ ಸಂಗ್ರಹ ಆಗುತ್ತದೆ. ಸ್ವಚ್ಛತೆ ಹಾಗೂ ತ್ಯಾಜ್ಯ ವಿಲೇವಾರಿ ಕಾರ್ಯವನ್ನು ಸ್ಥಗಿತಗೊಳಿಸಿ ಪಟ್ಟಣದ ಪೌರ ಕಾರ್ಮಿಕರು ತಮ್ಮ ಬೇಡಿಕೆ ಹಿನ್ನೆಲೆ ಮುಷ್ಕರಕ್ಕೆ ಮುಂದಾಗಿ ಎರಡು ದಿನ ಪೂರ್ಣಗೊಂಡಿದೆ. 2 ದಿನಗಳಿಂದ ಪಟ್ಟಣದ ಕೆಲ ವ್ಯಾಪಾರಿಗಳು ಹಾಗೂ ಮನೆಯವರು ಕಸ ಸಂಗ್ರಹಿಸಿಡಲಾಗದೆ ಕಸದ ತ್ಯಾಜ್ಯವನ್ನು ರಸ್ತೆ, ಸಾರ್ವಜನಿಕ ಸ್ಥಳಗಳೆನ್ನದೆ ಎಲ್ಲೆಂದರಲ್ಲಿ ಎಸೆದಿದ್ದು. ನೈರ್ಮಲ್ಯ ಪ್ರದೇಶಗಳು ಪ್ರಸ್ತುತ ತಿಪ್ಪೆಗಳಾಗಿ ಮಾರ್ಪಟ್ಟಿವೆ.

> ರಾಜ್ಯ ಪೌರ ನೌಕರರ ಸಂಘದ ಅಧ್ಯಕ್ಷರು ಕೆ.ಪ್ರಭಾಕರ್ ಪಟ್ಟಣದ ಪೌರ ನೌಕರರ ಮುಷ್ಕರದಲ್ಲಿ ಬುಧವಾರ ಪಾಲ್ಗೊಂಡು ಬೆಂಬಲಿಸಿದರು. ಸಿಎಂ ನಮ್ಮ ಬೇಡಿಕೆಗಳಿಗೆ ಲಿಖಿತ ಭರವಸೆ ನೀಡಿದ್ರೆ ಮುಷ್ಕರ ಹಿಂಪಡೆಯುವುದಾಗಿ ರಾಜ್ಯಾಧ್ಯಕ್ಷರು ತಿಳಿಸಿದ್ದಾರೆ. ಭರವಸೆ ಲಿಖಿತ ರೂಪದಲ್ಲಾದ್ರೆ ನೀಡದಿದ್ದರೆ ಮುಷ್ಕರ ನಿಲ್ಲದು. ಇದು ಪ್ರತಿ ಪೌರ ನೌಕರರ ಅಭಿಪ್ರಾಯವಾಗಿದೆ.
>
> **ಎಂ.ಕೊಟ್ರೇಶ್ ಅಧ್ಯಕ್ಷರು. ಪೌರ ನೌಕರರ ಸಂಘ.ಕೊಟ್ಟೂರು ಶಾಖೆ.**

ಎರಡೇ ದಿನಕ್ಕೆ ಇಷ್ಟೊಂದು ತ್ಯಾಜ್ಯ ಇಲ್ಲಿರುವಾಗ ಮುಷ್ಕರ ಈಗೇ ಮುಂದುವರಿದರೆ ಪಟ್ಟಣದಲ್ಲಿ ಎಲ್ಲೆಂದರಲ್ಲಿ ಕಸದ ತ್ಯಾಜ್ಯ ಹೆಚ್ಚಾಗಿ ದುರ್ನಾತದಿಂದ ಜನರು ಮೂಗು, ಬಾಯಿ ಮುಚ್ಚಿ ಓಡಾಡುವ ದುಸ್ಥಿತಿ ನಿರ್ಮಾಣ ಆಗಬಹುದು ಎಂಬ ಆತಂಕ ಜೊತೆಗೆ ಕೋವೀಡ್ ಭಯ ಸಾರ್ವಜನಿಕರಲ್ಲಿ ಆತಂಕ ತಂದಿದೆ.



ಮುಷ್ಕರದಿಂದ ಪಟ್ಟಣ ಪಂಚಾಯಿತಿಯಲ್ಲಿ ಲೇಖನಿ, ಕಂಪ್ಯೂಟರ್ ಕಾರ್ಯಕೂಡಾ ಸ್ಥಗಿತ ಗೊಂಡಿವೆ. ಇದರಿಂದ ಪಪಂ ಕಛೇರಿಯಲ್ಲಿ ಜನರ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಿದೆ. ಮುಖ್ಯಮಂತ್ರಿಗಳು ಶೀಘ್ರ ಸಭೆ ಕರೆದು ಪೌರ ನೌಕರರ ಬೇಡಿಕೆಗಳನ್ನು ಆಲಿಸಿ ಸೂಕ್ತ ಭರವಸೆಗಳ ಮೂಲಕ ಮುಷ್ಕರ ಹಿಂಪಡೆಯುವಂತೆ ಸೂಚಿಸಬೇಕು ಎಂದು ಕೆಲ ಪ್ರಜ್ಞಾವಂತ ನಾಗರಿಕರು ಆಗ್ರಹಿಸಿದರು.

# ರೈಲು ಡಿಕ್ಕಿಯಿಂದ ಗಾಯಗೊಂಡ ಗೂಳಿ ಮಾನವೀಯತೆ ಮೆರೆದ ಯುವಕರ ತಂಡ

## ಗೂಳಿಯನ್ನು ಕಟ್ಟಿಹಾಕಿ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸಿದ ಯುವಕರು | ಮೂಕಪ್ರಾಣಿ ವೇದನೆ ತಣಿಸಿದ ಪ್ರಾಣಿಪ್ರಿಯರ ಕಾರ್ಯಕ್ಕೆ ಮೆಚ್ಚುಗೆ

**ವೀರೇಶ್ ಉಪ್ಪಾರ್**
**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಗೂಳಿ ಬರ್ತಿದೆ ದೂರ ಹೋಗು ಅನ್ನುವವರ ನಡುವೆ ಗಾಯಗೊಂಡ ಗೂಳಿಯನ್ನು ಹಿಡಿದು ಪಶುವೈದ್ಯರಿಂದ ಚಿಕಿತ್ಸೆ ಕೊಡಿಸುವ ಮೂಲಕ ಮಾನವೀಯತೆ ಮರೆದ ಪಟ್ಟಣದ ಪ್ರಾಣಿಪ್ರಿಯ ಯುವಕರ ತಂಡ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಹೌದು., ಪಟ್ಟಣದಲ್ಲಿ ಗೂಳಿಯೊಂದು ರಸ್ತೆ ಮೂಲಕ ರೈಲ್ವೆ ಹಳಿ ದಾಟುವಾಗ ರೈಲು ಡಿಕ್ಕಿಯಿಂದ ಗಂಭೀರವಾಗಿ ಗಾಯಗೊಂಡು ನರಳುತ್ತಿ ದ್ದುದ್ದನ್ನು ಕಂಡ ಪ್ರಾಣಿ ಪ್ರಿಯ ಯುವಕರ ತಂಡ ಹರಸಾಹಸಪಟ್ಟು ಗೂಳಿಯನ್ನು ಹಿಡಿದು, ಪಶು ವೈದ್ಯರಿಂದ ಚಿಕಿತ್ಸೆ ಕೊಡಿಸಿ ಮಾನವೀಯತೆ ಮರೆದಿದ್ದಾರೆ.

ಪಟ್ಟಣದಲ್ಲಿ ಮಂಗಳವಾರ ರೈಲಿನ ರಭಸಕ್ಕೆ ಗೂಳಿಯ ಬೆನ್ನಿನ ಭಾಗ ತೀವ್ರ ಗಾಯಗೊಂಡು ರಕ್ತಸ್ರಾವದೊಂದಿಗೆ ರಸ್ತೆಯಲ್ಲಿ ನೋವನ್ನು ಹೇಳಿಕೊಳ್ಳಲಾಗದೆ ಅದರ ಆಕ್ರಂದನ ಮುಗಿಲು ಮುಟ್ಟುವಂತ್ತಿತ್ತು. ಮೂಕ ವೇದನೆಯೊಂದಿಗೆ ತಿರುಗಾಡುತ್ತಿದ್ದ ಗೂಳಿಯ ಸ್ಥಿತಿಯನ್ನು ನೋಡಿದ ಅನೇಕರು ಮರಗಿ ಮುಂದೆ ನಡೆಯುತ್ತಿದ್ದರು.

ಸಂತೋಷ ನೇತೃತ್ವದ ಯುವಕರ ತಂಡ ಹಾಗೂ ಅನಿಮಲ್ ವೆಲ್‌ಫೇರ್ ತಂಡದ ಯುವಕರು ಗೂಳಿಯನ್ನು ಹಿಡಿದು ಕಟ್ಟಿ ಹಾಕಿ ಪಶುವೈದ್ಯರನ್ನು ಕರೆಯಿಸಿ ಸೂಕ್ತ ಚಿಕಿತ್ಸೆ ಕೊಡಿಸಿ



ರಕ್ತಸ್ರಾವವನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ನಗರದಲ್ಲಿ ಬಿಡಾಡಿ ದನಗಳು ಸಹ ಅನೇಕ ಬಾರಿ ಇಂತಹ ಅವಘಡಗಳಿಗೆ ಒಳಗಾಗುತ್ತಲಿವೆ. ಮೂಕ ಪ್ರಾಣಿಗಳ ಬಗ್ಗೆ ಮಾನವೀಯತೆ ತೋರುವ ಮೂಲಕ ಇಂತಹ ಅವಘಡಗಳಿಂದ ಪ್ರಾಣಿಗಳನ್ನು ರಕ್ಷಿಸಬೇಕು ಎಂದು ಯುವಕ ಸಂತೋಷ ಮನವಿ ಮಾಡಿದ್ದಾನೆ. ಯುವಕರ ಕಾರ್ಯಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಗೂಳಿಗೆ ಚಿಕಿತ್ಸೆ ನೀಡಿದ ಪೋಟೋಗಳು ಸಾಮಾಜಿಕ ಜಾಲತಾಣದ್ಲಿ ವೈರಲ್ ಆಗಿವೆ.

ವೈದ್ಯಾಧಿಕಾರಿಗಳಾದ ಡಾ.ಪ್ರಶಾಂತ, ಡಾ.ಅಜಯ್, ಡಾ.ಪ್ರಕಾಶ್ ಹಾಗೂ ಸಿಬ್ಬಂದಿ ಗಳಾದ ಗೋಪಾಲ್, ದೊಡ್ಡಬಸಪ್ಪ, ಹನುಮಂತ ಸ್ಥಳಕ್ಕೆ ಆಗಮಿಸಿ ಚುಚ್ಚುಮದ್ದು ನೀಡಿ, ಹೊಲಿಗೆ ಹಾಕುವ ಮೂಲಕ ಸತತ ನಾಲ್ಕು ತಾಸು ಶ್ರಮವಹಿಸಿ ಚಿಕಿತ್ಸೆ ನೀಡಿದ್ದಾರೆ.

**ಯುವಕರ ತಂಡದ ಕಾರ್ಯ ಶ್ಲಾಘನೀಯ:** ಪಟ್ಟಣದ ನಿವಾಸಿಗಳಾದ ಸಂತೋಷ್ ಶೃಂಗಾರಮಠ್, ಆಟೋ ರವಿ, ಸತೀಶ್ ಪಾಟೀಲ್ ಸೇರಿದಂತೆ ಕೆಲವು ಯುವಕರ ತಂಡ ಯಾವುದೇ ಪ್ರಾಣಿಗಳಿಗೆ ಇಂತಹ ಘಟನೆ ನಡೆದಿರುವ ವಿಷಯ ತಿಳಿದರೇ ಸ್ಥಳಕ್ಕೆ ಧಾವಿಸಿ ಚಿಕಿತ್ಸೆಗೆ ಸಹಾಯ ಮಾಡುತ್ತಾರೆ. ಕೆಲವು ತಿಂಗಳುಗಳ ಹಿಂದೆ ಕೂಡ್ಲಿಗಿ ವೃತ್ತದಲ್ಲಿ ಎರಡು ಎತ್ತುಗಳು ಗುದ್ದಾಡಿಕೊಂಡು. ಒಂದು ಎತ್ತಿಗೆ ಕಣ್ಣಿನ ಭಾಗದಲ್ಲಿ ಗಾಯವಾಗಿತ್ತು, ಅಂದು ಸಹ ಇದೇ ಯುವಕರ ತಂಡ ವೈದ್ಯಾಧಿಕಾರಿಗಳ ಗಮನಕ್ಕೆ ತಂದು ಚಿಕಿತ್ಸೆ ಮಾಡಿಸಿ ಗಾಯಗೊಂಡ ಗೋವುಗಳಿಗೆ ಆರೈಕೆ ಮಾಡಿದ್ದರು. ಹಲವು ಬಾರಿ ಗಾಯಗೊಂಡ ನಾಯಿಗಳಿಗೂ ಚಿಕಿತ್ಸೆ ನೀಡಿದ್ದಾರೆ. ಮೂಕಪ್ರಾಣಿಗಳ ವೇದನೆಗೆ ಸ್ಪಂದಿಸುವ ಯುವ ಮನಸ್ಸುಗಳು ಪಟ್ಟಣದಲ್ಲಿರುವುದು ಪ್ರಾಣಿ ಪ್ರಿಯರಲ್ಲಿ ತುಸು ನೆಮ್ಮದಿ ತಂದಿದೆ.



> ಪಟ್ಟಣದಲ್ಲಿ ಕೆಲ ಸಮಾನ ಮನಸ್ಕರು ಸೇರಿಕೊಂಡು ಅನಿಮಲ್ ವೆಲ್‌ಫೇರ್ ಟೀಂ ಕಟ್ಟಿಕೊಂಡು ಇಂತಹ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದೇವೆ. ನಮಗೆ ತೊಂದರೆಯಾದರೇ ಇನ್ನೊಬ್ಬರಿಗೆ ಹೇಳಿಕೊಳ್ಳುತ್ತೇವೆ. ಮೂಕ ಪ್ರಾಣಿಗಳು ಯಾರ ಮುಂದೆ ಹೇಳಿಕೊಳ್ಳಬೇಕು. ಹಾಗಾಗಿ ಮಾನವೀಯತೆ ದೃಷ್ಟಿಯಿಂದ ಪ್ರಾಣಿಗಳ ಆರೈಕೆಗೆ ಮುಂದಾಗುತ್ತೇವೆ.
>
> – **ಸಂತೋಷ್ ಶೃಂಗಾರಮಠ್**
> ಪ್ರಾಣಿಪ್ರಿಯರು, ಹ.ಬೊ.ಹಳ್ಳಿ.

# ಹೇನಿನ ಹೊಳೆಯೋ....

■ ಭೋಜರಾಜ ಸೊಪ್ಪಿಮಠ ಕೊಪ್ಪಳ



ಹೆಣ್ಣು ಮಕ್ಕಳಿಗೆ ತಲೆಯಲ್ಲಿ ಹೇನು ಉಂಟಾಗುವದೇನೂ ಹೊಸ ವಿಷಯವೇನಲ್ಲ. ಒಂದಲ್ಲ ಒಂದು ಬಾರಿ ಆ ಕಿರಿಕಿರಿ, ಮುಜುಗರ ಅನುಭವಿಸಿರುತ್ತಾರೆ. ನೀಳ, ದಪ್ಪ ಹಾಗೂ ಸುಂದರ ತಲೆಗೂದಲು ಇರಬೇಕೆಂದು ಸಾಮಾನ್ಯವಾಗಿ ಎಲ್ಲರೂ ಬಯಸುತ್ತಾರೆ. ಚಿಕ್ಕ ಹೆಣ್ಣು ಮಗು ಶಾಲೆಯಿಂದ ತಲೆ ಕೆರೆದುಕೊಳ್ಳುತ್ತಾ ಮನೆಗೆ ಬಂದರೆ ಅದ್ಯಾರ ಜೊತೆ ಕುಳಿತಿದ್ದಿಯೇ ಅಂತ ಗದರಿಕೊಳ್ಳುವುದೂ ಉಂಟು. ಜೊತೆಯಾಗಿ ಕೂಡಿ ಆಡುವ ಮಕ್ಕಳಲ್ಲಿ ಬಹುಬೇಗನೇ ಒಬ್ಬರಿಂದ ಮತ್ತೊಬ್ಬರಿಗೆ ಹರಡಿ ಬಿಡುತ್ತದೆ.

ಹೇನು ಹೆಚ್ಚಾನು ಹೆಚ್ಚು ಹೆಣ್ಣು ಮಕ್ಕಳ ತಲೆಯಲ್ಲಿ ವಾಸ ಮಾಡುವಂತಹ ಪರಾವಲಂಬಿ ಜೀವಿ. ಸಣ್ಣ ಸಣ್ಣ ಕೂದಲನ್ನು ಹೊಂದಿರುವ ಗಂಡು ಹುಡುಗರಲ್ಲಿ ಹಾಗೂ ಪ್ರತಿದಿನ ತಲೆ ತೊಳೆದುಕೊಳ್ಳುವವರಲ್ಲಿ ಹೇನು ವಾಸಿಸುವದಿಲ್ಲ. ಗಾಢವಾದ ಕೂದಲನ್ನು ಹೊಂದಿರುವ ಹೆಣ್ಣು ಹುಡುಗಿಯರ ತಲೆಯೇ ಅದಕ್ಕೆ ಸರಿಯಾದ ಅಡಗುತಾಣ. ಹಾಗಾಗಿಯೇ ಹೆಣ್ಣುಮಕ್ಕಳನ್ನು ಹೇನುಗಳು ಹೆಚ್ಚು ಇಷ್ಟಪಡುತ್ತವೆ. ಇದರ ಆಹಾರವೆಂದರೆ ಮನುಷ್ಯನ ರಕ್ತ. ಒಂದು ಅಂದಾಜಿನ ಪ್ರಕಾರ ಒಂದು ಹೇನು ಒಂದು ಬಾರಿಗೆ ನೂರಕ್ಕೂ ಹೆಚ್ಚು ಮೊಟ್ಟೆಗಳನ್ನಿಡುತ್ತದೆಯಂತೆ. ರಕ್ತ ಬೀಜಾಸುರನಂತೆ ಇದರ ವಂಶ ಬೆಳೆಯುತ್ತಲೇ ಇರುತ್ತದೆ.

ಸೀರು ಎಂದು ಕರೆಯಲ್ಪಡುವ ಹೇನಿನ ಮೊಟ್ಟೆಗಳೇ ಮುಂದೆ ಹೇನುಗಳಾಗಿ ಬೆಳೆಯುತ್ತವೆ. ತಲೆಯಲ್ಲಿ ಹೆಚ್ಚು ಕಡಿತ ಮಾಡುವುದೇ ಈ ಸೀರುಗಳು. ರಾತ್ರಿ ಮಲಗಿದಾಗ ಈ ಹೇನುಗಳು ಏಳು ಹಾಸಿಗೆಯನ್ನು ದಾಟಿ ಮುಂದೆ ಹೋಗಬಲ್ಲವು ಎಂದು ಹಿರಿಯರು ಹೇಳುತ್ತಾರೆ. ಇದು ಎಷ್ಟರ ಮಟ್ಟಿಗೆ ಸತ್ಯವೋ ಗೊತ್ತಿಲ್ಲದಿದ್ದರೂ ಪಕ್ಕದಲ್ಲಿ ಮಲಗಿದವರ ತಲೆಗೆ ವರ್ಗಾವಣೆ ಆಗುವದಂತೂ ಸುಳ್ಳಲ್ಲ.

**ನಿವಾರಣೆ ಹೇಗೆ?:**

- ಬೇವಿನ ಬೀಜದ ಪುಡಿಯನ್ನು ನೀರಲ್ಲಿ ಕಲಸಿ ತಲೆಗೆ ಲೇಪಿಸಿ ನಂತರ ಬೇವಿನ ಕಷಾಯದಲ್ಲಿ ತೊಳೆದರೆ ಹೇನು ನಿವಾರಣೆಯಾಗುತ್ತವೆ.
- ತುಳಸಿ ಮತ್ತು ಬೇವಿನ ಎಲೆಗಳನ್ನು ಪೇಸ್ಟ್ ಮಾಡಿ ಹಚ್ಚಿದರೆ ಹೇನು ನಾಶವಾಗುತ್ತದೆ.
- ಆಲೀವ್ ಎಣ್ಣೆಯನ್ನು ರಾತ್ರಿ ತಲೆಗೆ ಹಚ್ಚಿ ಬೆಳಗ್ಗೆ ತಲೆ ಸ್ನಾನ ಮಾಡಿದರೆ ಹೇನು ಮತ್ತು ಅದರ ಮೊಟ್ಟೆಗಳು ನಾಶವಾಗುತ್ತವೆ.
- ಕೊಬ್ಬರಿ ಎಣ್ಣೆ ಬಜೆ ಪುಡಿ ಕಲಸಿ ಹಚ್ಚಿದರೂ ಕಡಿಮೆಯಾಗುವವು.
- ನೀರಿನಲ್ಲಿ ನೆನೆಸಿದ 5 –10 ಸಿಪ್ಪೆ ತೆಗೆದ ಬಾದಾಮಿಯನ್ನು 2
- 4 ಚಮಚ ನಿಂಬೆರಸದಲ್ಲಿ ಪೇಸ್ಟ್ ಮಾಡಿ ತಲೆಗೆ ಹಚ್ಚಿಕೊಳ್ಳಿ. 20 ನಿಮಿಷ ಬಿಟ್ಟು ಸ್ನಾನ ಮಾಡಿದರೂ ಕಡಿಮೆಯಾಗುವವು.
- ಪಾರಿಜಾತದ ಬೀಜವನ್ನು ನೀರಿನಲ್ಲಿ ಅರೆದು ತಲೆಗೆ ಹಚ್ಚಿದರೆ ಹೇನು ನಾಶವಾಗುವುದು.
- ಈರುಳ್ಳಿಯನ್ನು ಜಜ್ಜಿ ರಸ ತೆಗೆದು ರಸದಿಂದ ತಲೆಗೆ ಮಸಾಜ್ ಮಾಡಿ ಅರ್ಧ ಗಂಟೆ ಬಿಟ್ಟು ಸ್ನಾನ ಮಾಡಿದರೆ ಹೇನು ನಿವಾರಣೆಯಾಗುತ್ತದೆ.
- ಸೀತಾಫಲದ ಬೀಜದ ಪುಡಿಯನ್ನು ನೀರಿನ ಜೊತೆಗೆ ಕಲಸಿ ತಲೆಗೆ ಹಚ್ಚಿಕೊಂಡು ಆರಿದ ನಂತರ ತೊಳೆದುಕೊಳ್ಳಬೇಕು..
- ರಾತ್ರಿ ಮೆಂತ್ಯೆಕಾಳುಗಳನ್ನು ನೀರಿನಲ್ಲಿ ನೆನೆಸಿ ಬೆಳಗ್ಗೆ ಅದನ್ನು ಪೇಸ್ಟ್ ಮಾಡಿ ತಲೆಗೆ ಹಾಕಿ ನಂತರ ಕರ್ಪೂರದ ನೀರಿನಲ್ಲಿ ತಲೆ ಸ್ನಾನ ಮಾಡಿದರೂ ನಾಶವಾಗುತ್ತವೆ.
- ಬೆಳ್ಳುಳ್ಳಿಯನ್ನು ನಿಂಬೆರಸದಲ್ಲಿ ಪೇಸ್ಟ್ ಮಾಡಿ ತಲೆಗೆ ಹಚ್ಚಿ ನಂತರ ಸ್ನಾನ ಮಾಡಿದರೂ ಪ್ರಯೋಜನವಾಗುತ್ತದೆ.


## ನಿಮ್ಮ ಬೆಂಬಲವೇ ನಮ್ಮ ಬಲ

ಸ್ಥಳೀಯ ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆ ಮತ್ತಷ್ಟು ಅಭಿವೃದ್ಧಿಪಡಿಸಲು ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ, ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಯೇ ನಮ್ಮ ಧ್ಯೇಯ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಪೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು ಹಾಗೆಯೇ ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ಪ್ರತಿ ಸುದ್ದಿಯ ಹಿಂದೆ ಯೋಗ್ಯ ಶ್ರಮವಿದೆ. ಪತ್ರಿಕೆ ಕೊಂಡು ಓದಿ, ಆ ಶ್ರಮವನ್ನು ಗೌರವಿಸಿ!

ಹಂಪಿ ಟೈಮ್ಸ್, ಹೊಸಪೇಟೆ


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038


## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


**ವಿಜಯನಗರ ಶ್ರೇಷ್ಠ ದೊರೆ ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರಮಾತ್ಯನು ಚಿಕ್ಕವನಿದ್ದಾಗ ಅವನ ತಾಯಿಯು ಬಾಲಕನ ಬಾಯಿಯಲ್ಲಿ ಹಾಲೆರೆಯುತ್ತಾ ಕಿವಿಯಲ್ಲಿ ಈ ರೀತಿ ಹೇಳುತ್ತಿದ್ದಳಂತೆ. "ಮಗುವೇ ನೀನು ದೊಡ್ಡವನಾದ ಮೇಲೆ ಲೋಕೋಪಕಾರಕ್ಕಾಗಿ ಕೆರೆಗಳನ್ನು ಕಟ್ಟಿಸು, ಬಾವಿಗಳನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಸೆರೆಯಲ್ಲಿರುವ ಅನಾಥರನ್ನು ಬಿಡಿಸು, ಮಿತ್ರರಿಗೆ ಸಹಕಾರಿಯಾಗಿರು, ನಂಬಿದವರಿಗೆ ಆಶ್ರಯ ನೀಡು, ಶಿಷ್ಯರನ್ನು ಕಾಪಾಡು" ಎಂಬುದಾಗಿ ಹೇಳಿದ, ಕನ್ನಡಿಗರ ಹಿರಿಮೆಯನ್ನು ಮುಗಿಲೆತ್ತರಕ್ಕೆ ಏರಿಸಿದ ಶಾಸನ ಹಂಪಿಯಲ್ಲಿದೆ**

# ನಮ್ಮ ಶಾಸನಗಳು - ನಮ್ಮ ಹೆಮ್ಮೆ

## ಅಶೋಕನ ಶಾಸನಗಳ ಅಕ್ಷರಗಳನ್ನು ಗುರುತಿಸಿ ಓದಿದ ಮೊದಲ ವ್ಯಕ್ತಿ ಬ್ರಿಟೀಷ್ ಅಧಿಕಾರಿ ಜೇಮ್ಸ್ ಪ್ರಿನ್ಸೆಪ್

ಶಾಸನ ಎನ್ನುವುದು ಸಂಸ್ಕೃತ ಭಾಷೆಯ ಪದ. ಶಾಸ್ ಎನ್ನುವುದು ಸಂಸ್ಕೃತದ ಧಾತು. ಇದರಿಂದ ಶಾಸನ ಎನ್ನುವ ಪದ ವ್ಯುತ್ಪತ್ತಿಯಾಗಿದೆ. ಆಜ್ಞೆಮಾಡು ಎನ್ನುವುದು ಇದರ ಸಾಮಾನ್ಯ ಅರ್ಥ. ಸರಳವಾಗಿ ಹೇಳುವುದಾದರೆ ಇವು ರಾಜನ ಆಜ್ಞೆಗಳು. ಲಿಪಿಯ ಬಳಕೆಗೂ ಮುನ್ನ ರಾಜನ ಆಜ್ಞೆಗಳೆಲ್ಲ ಮೌಖಿಕವಾಗಿ ಇರುತ್ತಿದ್ದವು. ಲಿಪಿಯ ಆವಿಷ್ಕಾರದ ನಂತರ ಅರಸರು ತಮ್ಮ ಆಜ್ಞೆಗಳನ್ನು, ಆದೇಶಗಳನ್ನು ಬಂಡೆಗಲ್ಲುಗಳ ಮೇಲೆ ಕೆತ್ತಿಸುತ್ತಿದ್ದರು. ಇವೇ ಶಾಸನಗಳು.

ಸಾಮ್ರಾಟ್ ಅಶೋಕನು (ಕ್ರಿ.ಪೂ.273 – ಕ್ರಿ.ಪೂ.232) ಭಾರತದಲ್ಲಿ ಶಾಸನಗಳನ್ನು ಬರೆಯಿಸಿದ ಮೊದಲ ದೊರೆಯಾಗಿದ್ದಾನೆ. ಈತನ ಶಾಸನಗಳು ಭಾರತದ ಎಲ್ಲ ಕಡೆಯೂ ಕಂಡು ಬರುತ್ತವೆ. ಅಶೋಕನ ಶಾಸನಗಳು ಬ್ರಾಹ್ಮೀ ಲಿಪಿ ಹಾಗೂ ಪ್ರಾಕೃತ ಭಾಷೆಯಲ್ಲಿವೆ. ಪ್ರಾಕೃತ ಭಾಷೆಯು ಆಗಿನ ಸಾಮಾನ್ಯ ಜನರ ಆಡುಭಾಷೆ ಆಗಿತ್ತು. ಅದಕ್ಕಾಗಿ ಪ್ರಾಕೃತ ಭಾಷೆಯಲ್ಲಿ ಶಾಸನಗಳನ್ನು ಬರೆಸಿದನು. ಬ್ರಹ್ಮನಿಂದ ಬಂದ ಭಾಷೆ ಆಗಿದ್ದರಿಂದ ಬ್ರಾಹ್ಮೀ ಎಂದು ಕರೆಯುತ್ತಾರೆ ಎನ್ನುವ ಐತಿಹ್ಯ ಇದೆ. ಇನ್ನೊಂದು ಕಥೆಯ ಪ್ರಕಾರ ಜೈನರ ತೀರ್ಥಂಕರನಾದ ಚಕ್ರವರ್ತಿ ವೃಷಭನಾಥ ತೀರ್ಥಂಕರನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಬ್ರಾಹ್ಮೀ ಮತ್ತು ಸುಂದರಿ ಎಂದು ಅವರ ಹೆಸರುಗಳು. ವೃಷಭನಾಥ ತೀರ್ಥಂಕರನು ಬ್ರಾಹ್ಮಿಗೆ ಭಾಷೆಯನ್ನೂ, ಸುಂದರಿಗೆ ಸಂಖ್ಯೆಗಳನ್ನು ನೀಡಿದನೆಂದೂ ಅವರಿಬ್ಬರಿಂದ ಭಾಷೆ ಮತ್ತು ಗಣಿತ ಈ ಜಗತ್ತಿನಲ್ಲಿ ಬೆಳೆದು ಬಂದವೆಂದೂ ಹೇಳುತ್ತಾರೆ.

ಅಶೋಕನ ಶಾಸನಗಳನ್ನು 'ಧರ್ಮಶಾಸನಗಳು' ಎಂದೇ ಕರೆಯುತ್ತಾರೆ. ಏಕೆಂದರೆ ಅಶೋಕನು ಬಹುತೇಕ ತನ್ನ ಶಾಸನಗಳಲ್ಲಿ ಧರ್ಮಮಾರ್ಗವನ್ನೇ ಬೋಧಿಸಿದ್ದನು. ತನ್ನ ಪ್ರಜೆಗಳೆಲ್ಲರೂ ಧಾರ್ಮಿಕರಾಗಿ ಒಳ್ಳೆಯ ಗುಣ ನಡತೆಗಳನ್ನು ರೂಢಿಸಿಕೊಳ್ಳಲಿ ಎನ್ನುವುದು ಅಶೋಕನ ಇಚ್ಛೆಯಾಗಿತ್ತು. ರಾಜ್ಯದಲ್ಲಿ ರಣಘೋಷಕ್ಕೆ ಬದಲಾಗಿ ಧರ್ಮಘೋಷ ಮೊಳಗಬೇಕೆಂಬುದು ಅಶೋಕನ ಬಯಕೆ ಆಗಿತ್ತು. ಈತನ ಹನ್ನೊಂದು ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ, ಸಿದ್ದಾಪುರ, ಬ್ರಹ್ಮಗಿರಿ, ಬಳ್ಳಾರಿ ಜಿಲ್ಲೆಯ ನಿಟ್ಟೂರು, ಉದೇಗೊಳಂ, ಕೊಪ್ಪಳ ಜಿಲ್ಲೆಯ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಅಶೋಕನ ಶಾಸನಗಳಿವೆ. ಅಶೋಕನ ಎಲ್ಲ ಶಾಸನಗಳಲ್ಲಿ ಆತನ ಹೆಸರು ದೇವನಾಂಪ್ರಿಯ, ಪ್ರಿಯದರ್ಶಿ ಎಂಬುದಾಗಿ ಇದೆ. ಬಹುಕಾಲ ಈ ದೊರೆ ಯಾರು ಎಂಬುದೇ ಸಂಶೋಧಕರಿಗೆ ತಿಳಿದಿರಲಿಲ್ಲ, ಆದರೆ ಮಸ್ಕಿಯ ಶಾಸನದಲ್ಲಿ 'ದೇವನಾಂಪಿಯ, ಪಿಯದಸಿ, ಅಸೋಕೋ' ಎಂಬುದಾಗಿ ಇದೆ. ಇದರಿಂದ ಅಶೋಕನೇ ಈ ಶಾಸನಗಳ ಕರ್ತೃ ಎಂಬುದಾಗಿ ತಿಳಿದು ಬಂತು. ಇದರಿಂದ ಮಸ್ಕಿ ಶಾಸನಕ್ಕೆ ಒಂದು ವಿಶೇಷತೆ ಬಂದಿದೆ.

ಶಾಸನ ಎಂಬುದನ್ನು ಇಂಗ್ಲಿಷ್ನಲ್ಲಿ Inscription ಎಂದು ಕರೆಯುತ್ತಾರೆ. ಇಂದು ಈ 'ಶಾಸನ ಶಾಸ್ತ್ರ' ಅತ್ಯಂತ ವಿಸ್ತಾರವಾಗಿ ಬೆಳೆದು ಬಂದಿದೆ. ಭಾರತದ ಇತಿಹಾಸವನ್ನು ರಚಿಸಲು ಶಾಸನಗಳೇ ಆಧಾರವಾಗಿ ನಿಂತಿವೆ. ಹಾಗಾಗಿ ಚಕ್ರವರ್ತಿ ಅಶೋಕನ ನಂತರದ ಕಾಲದ ಇತಿಹಾಸವೇ ನಮಗೆ ಸರಿಯಾದ ಇತಿಹಾಸವಾಗಿದೆ. ಅಶೋಕನು ರೂಪಿಸಿದ ಕರ್ನಾಟಕದ ಬಹುತೇಕ ಶಾಸನಗಳನ್ನು 'ಚಪಡ' ಎಂಬುವನು ರಚಿಸಿದನು ಹಾಗೂ ಈತನು ಅಫಘಾನಿಸ್ತಾನದವನು ಎನ್ನುತ್ತಾರೆ.

ಪ್ರಾರಂಭದಲ್ಲಿ ರಾಜರುಗಳು ಮಾತ್ರ ಈ ಧಾರ್ಮಿಕ ಉದ್ದೇಶದ ಧರ್ಮಶಾಸನಗಳನ್ನು ಬರೆಸುತ್ತಿದ್ದರು, ಕಾಲ ಕಳೆದಂತೆ ನಾನಾ ಕಾರಣಗಳಿಗಾಗಿ ಬರೆಸಲು ಪ್ರಾರಂಭಿಸಿದರು. ದೇವಾಲಯ, ಧರ್ಮಛತ್ರ, ಕೆರೆಗಳು, ಬಾವಿಗಳನ್ನು ನಿರ್ಮಿಸಿದ ಕಾರಣಕ್ಕೆ ಶಾಸನಗಳನ್ನು ಬರೆಸಲು ಆರಂಭಿಸಿದರು. ಇವುಗಳಲ್ಲಿ ರಾಜನ ಹೆಸರು, ಕಾಲ, ಉದ್ದೇಶ ಇತ್ಯಾದಿಗಳನ್ನು ನಮೂದಿಸಲು ಪ್ರಾರಂಭಿಸಿದರು. ಹಾಗೆಯೇ ಅಗ್ರಹಾರಗಳಿಗೆ, ದೇವಾಲಯಗಳಿಗೆ, ಘಟಿಕಾಸ್ಥಾನಗಳಿಗೆ ಭೂಮಿ, ಹಣ ಇತ್ಯಾದಿಗಳನ್ನು ದಾನ ನೀಡಿದ ಕಾರಣಕ್ಕಾಗಿ ರಾಜನ ಅನುಮತಿಯೊಂದಿಗೆ ಮಂತ್ರಿಗಳೂ, ದಂಡನಾಯಕರೂ, ಶ್ರೀಮಂತರೂ ಶಾಸನಗಳನ್ನು ಬರೆಯಿಸಿದರು. ಯುದ್ಧದಲ್ಲಿ ಗೆದ್ದು ದೇವಾಲಯಗಳನ್ನೂ, ವಿಜಯಸ್ಥಂಬಗಳನ್ನು ನಿರ್ಮಿಸಿ ಶಾಸನಗಳನ್ನು ರಚಿಸುತ್ತಿದ್ದರು. ವೀರಗಲ್ಲುಗಳು, ಮಾಸ್ತಿಗಲ್ಲುಗಳು, ವೀರಯೋಧರ ಕುರಿತಾಗಿಯೂ ಶಾಸನಗಳು ರಚನೆಯಾದವು. ಹೀಗೆ ವಿವಿಧ ಕಾರಣಗಳಿಗಾಗಿ ರಾಜನ ಹೊರತಾಗಿಯೂ ಶಾಸನಗಳು ರಚನೆಯಾದವು. ಆದರೆ ಬಹುತೇಕ ಶಾಸನಗಳು ರಾಜನ ಅನುಮತಿಯನ್ನು ಪಡೆದೇ ರೂಪುಗೊಳ್ಳುತ್ತಿದ್ದವು.

ಈ ಶಾಸನಗಳು ಆರಂಭದ ಕಾಲದಲ್ಲಿ ಬಂಡೆಗಳ ಮೇಲೆ ಮಾತ್ರ ರಚನೆಯಾಗುತ್ತಿದ್ದವು. ಅನೇಕ ಶಾಸನಗಳು ಒರಟು ಬಂಡೆಯ ಮೇಲೆಯೇ ಇವೆ. ಕಾಲಾನಂತರ ಈ ಬಂಡೆಗಳನ್ನು ನಯಗೊಳಿಸಿ ಅವುಗಳ ಮೇಲೆ ಬರೆಸುತ್ತಿದ್ದರು. ಹೊಯ್ಸಳರ ಕಾಲದ ಶಾಸನಗಳು ಬಹು ಸುಂದರವಾಗಿವೆ. ಅವರ ಅಕ್ಷರಗಳೂ ಸೊಗಸಾಗಿವೆ. ವಿಜಯನಗರ ಕಾಲದ ಶಾಸನಗಳ ಅಕ್ಷರಗಳು ಈಗಿನ ಹೊಸಗನ್ನಡಕ್ಕೆ ಸಮೀಪವಿದ್ದು ಸ್ವಲ್ಪ ಪ್ರಯತ್ನಿಸಿದರೆ ಎಲ್ಲರೂ ಓದಬಹುದು. ಈ ಶಾಸನಗಳಿಂದ ಕಳೆದ ಎರಡು ಸಾವಿರ ವರ್ಷಗಳಲ್ಲಿ ಕನ್ನಡದ ಅಕ್ಷರಗಳು ಹೇಗೆ ರೂಪಾಂತರ ಹೊಂದುತ್ತಾ ಬಂದು ಇಂದಿನ ರೂಪದಲ್ಲಿವೆ ಎಂದು ತಿಳಿಯಬಹುದು.



ಬಿ.ಎಂ.ರಾಜಶೇಖರ, ಶಿಕ್ಷಕರು
M:9900705323
Scan For Digital Colourful
HAMPI TIMES E-paper

ಶಾಸನಗಳಲ್ಲೂ ನಾನಾ ವಿಧಗಳಿವೆ. ಬಂಡೆ ಶಾಸನ ಅಥವಾ ಕಲ್ಬರಹ, ಸ್ತಂಭ ಶಾಸನ, ಘಂಟಾ ಶಾಸನ, ಮಡಿಕೆ ಶಾಸನ, ತಾಮ್ರ ಶಾಸನ ಇತ್ಯಾದಿ ಬಗೆಯಾಗಿ ಶಾಸನಗಳನ್ನು ರಚಿಸಿದ್ದಾರೆ. ಈ ಶಾಸನಗಳಿಂದ ನಾವು ಅನೇಕ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಶಾಸನದ ಕಾಲ, ಪ್ರಭುತ್ವ, ರಾಜ್ಯದ ವಿಸ್ತಾರ, ಭಾಷೆ, ಜನರ ಸಂಸ್ಕೃತಿ, ಯುದ್ಧಗಳು ಹೀಗೆ ಅನೇಕ ಸಂಗತಿಗಳನ್ನು ಇವುಗಳು ನಮಗೆ ತಿಳಿಸುತ್ತವೆ. ಇವೆಲ್ಲವುಗಳ ಆಧಾರದಲ್ಲಿ ನಮ್ಮ ಇತಿಹಾಸವನ್ನು ರಚಿಸಲು ಶಾಸನಗಳು ನೆರವು ನೀಡಿವೆ. ಕಲ್ಲಿನ ಮೇಲೆ ಕೆತ್ತಿಸಿದರೆ ಸಾವಿರಾರು ವರ್ಷಗಳ ಕಾಲ ಇವು ಉಳಿಯುತ್ತವೆ ಎಂಬ ಕಾರಣದಿಂದ ಇವುಗಳನ್ನು ಕಲ್ಲಿನ ಮೇಲೆಯೇ ಕೆತ್ತಿಸಿದ್ದಾರೆ. ಎಲ್ಲ ರಾಜರುಗಳು ತಮ್ಮ ರಾಜ್ಯದ ಜನರ ಮಾತೃಭಾಷೆಯಲ್ಲಿಯೇ ಬಹಳಷ್ಟು ಶಾಸನಗಳನ್ನು ಬರೆಸಿದ್ದಾರೆ. ಇದರಿಂದ ಆ ರಾಜ್ಯದ ವಿಸ್ತಾರದ ಕುರಿತಾಗಿಯೂ ನಮಗೆ ತಿಳಿಯುತ್ತದೆ. ಇಷ್ಟಾಗಿಯೂ ಸಂಸ್ಕೃತ ಭಾಷೆಯ ಶಾಸನಗಳು ಭಾರತದ ಎಲ್ಲ ಭಾಗಗಳಲ್ಲೂ ಕಂಡುಬರುತ್ತವೆ. ಅಶೋಕನ ಕೆಲವು ಶಾಸನಗಳು ಖರೋಷ್ಠಿ ಭಾಷೆಯಲ್ಲಿದ್ದು ಅವುಗಳು ನಮ್ಮ ದೇಶದ ವಾಯುವ್ಯ ಭಾಗದಲ್ಲಿ ಮಾತ್ರ ಕಂಡುಬರುತ್ತವೆ.

ಭಾರತದ ಎಲ್ಲ ಕಡೆ ಶಾಸನಗಳು ಕಂಡು ಬಂದರೂ ಅವುಗಳನ್ನು ಓದಲು ಸಾಧ್ಯವಾಗಿರಲಿಲ್ಲ. ಬದಲಾಗಿ ಅವುಗಳನ್ನು ಓದಬಾರದು ಎಂದೇ ಜನರು ನಂಬಿಕೊಂಡಿದ್ದರು. ಇವು ಪೈಶಾಚಿ ಭಾಷೆಯಲ್ಲಿವೆ, ರಾಕ್ಷಸೀ ಭಾಷೆಯಲ್ಲಿವೆ, ಓದಿದರೆ ಸಾಯುತ್ತಾರೆ, ದೇವರು ಬರೆದಿದ್ದಾನೆ ಹೀಗೆ ನಾನಾ ಮೌಢ್ಯಗಳಿಗೆ ಒಳಗಾಗಿದ್ದರು. ಹೀಗಾಗಿ ಪ್ರಾಚೀನ ಕಾಲದ ಅಶೋಕನ ಶಾಸನಗಳನ್ನು ಓದಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ಆಗ ಭಾರತಕ್ಕೆ ಬಂದಿದ್ದ ಬ್ರಿಟಿಷ್ ಅಧಿಕಾರಿ 'ಜೇಮ್ಸ್ ಪ್ರಿನ್ಸೆಪ್' (20 Aug 1799 – 22 Apr 1840) ಮೊಟ್ಟಮೊದಲು ಅಶೋಕನ ಶಾಸನಗಳ ಅಕ್ಷರಗಳನ್ನು ಗುರುತಿಸಿ ಓದಿದನು. ಬ್ರಾಹ್ಮೀ ಮತ್ತು ಖರೋಷ್ಠಿ ಎರಡೂ ಭಾಷೆಯ ಶಾಸನಗಳನ್ನು ಓದಿದ, ಅರ್ಥ ಹೇಳಿದ ಮೊದಲ ವ್ಯಕ್ತಿ ಈ ಜೇಮ್ಸ್ ಪ್ರಿನ್ಸೆಪ್. ಈತನು ಕೊಲ್ಕತ್ತಾದಲ್ಲಿದ್ದ 'The Asiatic Society of Bengal' ಎನ್ನುವ ಪತ್ರಿಕೆಯ ಸಂಸ್ಥಾಪಕ ಸಂಪಾದಕನೂ ಕಾರ್ಯದರ್ಶಿಯೂ ಆಗಿದ್ದನು. ಭಾರತದ ಶಾಸನಗಳನ್ನು ಓದುವ, ಅಧ್ಯಯನ ಮಾಡುವ ಕಾರ್ಯಕ್ಕೆ ಈತನು ನಾಂದಿ ಹಾಡಿದನು.





ನಂತರ ಇಲ್ಲಿ ಶಾಸನಗಳ ಅಧ್ಯಯನ ಆರಂಭವಾಯಿತು.

ಕರ್ನಾಟಕದಲ್ಲಿ ಅಂದಾಜು ನಲವತ್ತು ಸಾವಿರ ಶಾಸನಗಳಿವೆ ಎನ್ನಲಾಗಿದೆ. ಇವುಗಳಲ್ಲಿ ಇಪ್ಪತ್ತೈದು ಸಾವಿರ ಶಾಸನಗಳು ದಾನಶಾಸನಗಳೇ ಆಗಿವೆ. ಇದು ಕನ್ನಡಿಗರ ದಾನಗುಣದ ಹಿರಿಮೆಯನ್ನು ತೋರಿಸುತ್ತದೆ. ದಾನದ ಮೂಲಕ ಪರೋಪಕಾರ ಮಾಡಬೇಕು ಎನ್ನುವ ಮೌಲ್ಯ ಉನ್ನತವಾಗಿ ಬೆಳೆದು ಬಂದಿತ್ತು. ಇದರಿಂದಾಗಿ ಬಾವಿ, ಕೆರೆ, ದೇವಾಲಯ ಮುಂತಾದವುಗಳ ನಿರ್ಮಾಣ ಕಾರ್ಯಗಳು ನಿರಂತರವಾಗಿ ನಡೆದು ಬಂದವು. ವೀರಗಲ್ಲುಗಳು ಕನ್ನಡಿಗರ ಶೌರ್ಯಗುಣವನ್ನೂ, ನಾಡ ಪ್ರೇಮವನ್ನೂ ತೋರಿಸಿದವು. ಒಟ್ಟಾರೆ ಒಂದು ನಾಡಿನ ಉನ್ನತ ಮೌಲ್ಯಗಳನ್ನು ಈ ಶಾಸನಗಳ ಮೂಲಕ ನಾವು ಅರಿಯಬಹುದು.

ಕರ್ನಾಟಕದ ಪ್ರಾಚೀನ ಶಾಸನಗಳೆಂದರೆ ಅಶೋಕನ ಶಾಸನಗಳೇ ಆಗಿವೆ. ಅಶೋಕನ ಹೆಸರನ್ನು ತಿಳಿಸಿದ ಮಸ್ಕಿಯ ಶಾಸನವು ನಮ್ಮ ಹೆಮ್ಮೆಯ ಶಾಸನ ಆಗಿರುವಂತೆಯೇ ಅಖಿಲ ಭಾರತದ ಹೆಗ್ಗುರುತಾದ ಶಾಸನವಾಗಿದೆ. ಕರ್ನಾಟಕ ಹಾಗೂ ಕನ್ನಡ ಭಾಷೆಯ ಅಸಂಖ್ಯ ಶಾಸನಗಳಲ್ಲಿ ಕೆಲವು ಶಾಸನಗಳು ನಮ್ಮ ಹೆಮ್ಮೆಯ ಗುರುತುಗಳಾಗಿ ಕಂಗೊಳಿಸುತ್ತವೆ. ಅಂತಹವುಗಳಲ್ಲಿ ಹಲ್ಮಿಡಿ ಶಾಸನವು ಕನ್ನಡ ಭಾಷೆಯ ಮೊದಲ ಶಾಸನವಾಗಿದೆ. ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಎನ್ನುವ ಊರಿನಲ್ಲಿ ದೊರೆತ ಈ ಶಾಸನವು ಕನ್ನಡ ಭಾಷೆಯ ಚರಿತ್ರೆಯಿಂದ ಮಹತ್ವದ್ದಾಗಿದೆ. ಇದನ್ನು ರಚಿಸಿದ ಕಾಲ ಕ್ರಿ.ಶ.450 ಆಗಿದ್ದು ಇದನ್ನು ಡಾ.ಎಂ.ಎಚ್.ಕೃಷ್ಣ ಶೋಧಿಸಿದ್ದಾರೆ. ಇದು ಸಂಸ್ಕೃತ ಮಿಶ್ರಿತ ಕನ್ನಡ ಶಾಸನವಾಗಿದೆ. ಹದಿನಾರು ಸಾಲುಗಳನ್ನು ಹೊಂದಿರುವ ಇದರಲ್ಲಿ ಕನ್ನಡ ಪದಗಳ ಬಳಕೆ ಆಗಿದೆ. ಮೂರು ಸಾಲುಗಳು ಕನ್ನಡದ ಸಾಲುಗಳೇ ಆಗಿವೆ. ಪೂರ್ವದ ಹಳಗನ್ನಡದ ಲಿಪಿ ಹಾಗೂ ಭಾಷೆ ಇದರಲ್ಲಿದೆ. ಇದೊಂದು ದತ್ತಿ ಶಾಸನವಾಗಿದ್ದು ಕದಂಬರ ದೊರೆ ಕಾಕುಸ್ಥವರ್ಮನು ಇದನ್ನು ಬರೆಯಿಸಿದ್ದಾನೆ. ಈ ಶಾಸನದ ಪ್ರಕಾರ "ಕಾಕುಸ್ಥವರ್ಮನು ಆಳುತ್ತಿದ್ದಾಗ ಕದಂಬರಿಗೂ ಪಲ್ಲವರಿಗೂ ಯುದ್ಧವಾಗುತ್ತದೆ. ಆಗ ವಿಜ ಅರಸ ಎಂಬ ವೀರನು ಕದಂಬರ ಪರವಾಗಿ ಯುದ್ಧಮಾಡಿ ಪಲ್ಲವರನ್ನು ಸೋಲಿಸಿದನು. ಇದರಿಂದ ನರಿದಾವಿಳೆ ಎಂಬ ಪ್ರದೇಶದ ಅಧಿಕಾರಿಗಳಾದ ಮೃಗೇಶ ಮತ್ತು ನಾಗ ಎಂಬುವರು ವಿಜ ಅರಸನಿಗೆ ಹಲ್ಮಿಡಿ ಮತ್ತು ಮೂಳಿವಳ್ಳಿ ಎಂಬ ಎರಡು ಹಳ್ಳಿಗಳನ್ನು ದಾನವಾಗಿ ನೀಡಿದರು." ಇದು ಹಲ್ಮಿಡಿ ಶಾಸನದ ಸಾರಾಂಶವಾಗಿದೆ.

ತಾಳಗುಂದದ ಶಾಸನವು ಮಯೂರವರ್ಮನ ಹಿರಿಮೆಯನ್ನು ಹೇಳುವುದಾದರೂ ಇದು ಸಂಸ್ಕೃತದ ಶಾಸನವಾಗಿದೆ. ಕನ್ನಡದ ಮೊದಲ ದೊರೆಯ ಇತಿಹಾಸವನ್ನು ಹೇಳುವ ಮೂವತ್ನಾಲ್ಕು ಪದ್ಯಗಳ ಈ ಶಾಸನವನ್ನು ಕುಬ್ಜ ಎನ್ನುವ ಸಂಸ್ಕೃತ ಕವಿ ರಚಿಸಿದ್ದಾನೆ. ನಮ್ಮ ಇನ್ನೊಂದು ಹೆಮ್ಮೆಯ ಶಾಸನವೆಂದರೆ ರವಿಕೀರ್ತಿ ಎಂಬ ಕವಿ ರಚಿಸಿದ ಸಂಸ್ಕೃತ ಭಾಷೆಯ ಕನ್ನಡ ಲಿಪಿಯ ಶಾಸನವಾಗಿದೆ. (ರಚನೆ 634–635). ಐಹೊಳೆ ಮೊದಲು ಚಾಲುಕ್ಯರ ರಾಜಧಾನಿಯಾಗಿದ್ದು ನಂತರ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಐಹೊಳೆಯ ಮೇಗುತಿ ದೇವಾಲಯದ ಪೂರ್ವದ ಗೋಡೆಯ ಮೇಲೆ ಕೆತ್ತಿರುವ ಹತ್ತೊಂಭತ್ತು ಸಾಲಿನ ಈ ಶಾಸನವು ಇಮ್ಮಡಿ ಪುಲಿಕೇಶಿಯು ಹರ್ಷನನ್ನು ಸೋಲಿಸಿದ ದಿಗ್ವಿಜಯವನ್ನು ನಿರೂಪಿಸುತ್ತದೆ. ಇದು ಕನ್ನಡದ ದೊರೆಯೊಬ್ಬನು ಸಾಧಿಸಿದ ಅತಿ ದೊಡ್ಡ ವಿಜಯದ ಸಂಗತಿಯನ್ನು ತಿಳಿಸುತ್ತದೆ. ಇದು ಕನ್ನಡಿಗರ ಹಿರಿಮೆಯ ಶಾಸನವಾಗಿದೆ.

ವಿಜಯನಗರ ಶ್ರೇಷ್ಠ ದೊರೆ ಪ್ರೌಢದೇವರಾಯನ ಮಂತ್ರಿಯೊಬ್ಬನಾದ ಲಕ್ಷ್ಮೀಧರಮಾತ್ಯ ಎಂಬುವನು ನಿರ್ಮಿಸಿದ "ಲಕ್ಷ್ಮೀಧರಮಾತ್ಯನ ಶಾಸನ" ಎಂಬ ಹೆಸರಿನ ಈ ಶಾಸನವು ಕನ್ನಡಿಗರ ಹಿರಿಮೆಯನ್ನು ಮುಗಿಲೆತ್ತರಕ್ಕೆ ಏರಿಸಿದ ಶಾಸನವಾಗಿದೆ. ಮಾನವನು ಬದುಕಬೇಕಾದ ಬಗೆಯನ್ನು ಇದು ನಮಗೆ ಹೇಳುತ್ತದೆ. ಹಂಪೆಯಲ್ಲಿರುವ ಈ ಶಾಸನವು ಕನ್ನಡದ ತಾಯಿಯೊಬ್ಬಳ ಶ್ರೇಷ್ಠತೆಯನ್ನು ಸಾರಿ ಹೇಳುತ್ತದೆ. ಲಕ್ಷ್ಮೀಧರಮಾತ್ಯನು ಚಿಕ್ಕವನಿದ್ದಾಗ ಅವನ ತಾಯಿಯು ಬಾಲಕನ ಬಾಯಿಯಲ್ಲಿ ಹಾಲೆರೆಯುತ್ತಾ ಕಿವಿಯಲ್ಲಿ ಈ ರೀತಿ ಹೇಳುತ್ತಿದ್ದಳಂತೆ

`ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದವ ।
ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
ನೆರೆದಳ್ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಮಾತ್ಯನಾ ।

"ಮಗುವೇ ನೀನು ದೊಡ್ಡವನಾದ ಮೇಲೆ ಲೋಕೋಪಕಾರಕ್ಕಾಗಿ ಕೆರೆಗಳನ್ನು ಕಟ್ಟಿಸು, ಬಾವಿಗಳನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಸೆರೆಯಲ್ಲಿರುವ ಅನಾಥರನ್ನು ಬಿಡಿಸು, ಮಿತ್ರರಿಗೆ ಸಹಕಾರಿಯಾಗಿರು, ನಂಬಿದವರಿಗೆ ಆಶ್ರಯ ನೀಡು, ಶಿಷ್ಯರನ್ನು ಕಾಪಾಡು" ಎಂಬುದಾಗಿ ಹೇಳುತ್ತಿದ್ದಳಂತೆ. ಇದರಲ್ಲಿ ವೈಯಕ್ತಿಕವಾದ ಯಾವ ಅಂಶಗಳನ್ನೂ ಹೇಳದೇ ಜನಗಳ ಉನ್ನತಿಗಾಗಿ, ನಾಡಿನ ಉನ್ನತಿಗಾಗಿ ನಿನ್ನ ಬದುಕು ಮುಡಿಪಾಗಿರಲಿ ಎಂಬುದು ಆ ತಾಯಿಯ ಹರಕೆಯಾಗಿತ್ತು. ಇಂತಹ ಶ್ರೇಷ್ಠ ತಾಯಿ ಕನ್ನಡದವಳು ಎನ್ನುವ ಹೆಮ್ಮೆ ನಮ್ಮದು. ನಂತರ ಇದೇ ಲಕ್ಷ್ಮೀಧರನು ಪ್ರೌಢದೇವರಾಯನಲ್ಲಿ ಮಂತ್ರಿಯಾಗಿ 'ಲಕ್ಷ್ಮೀಧರಮಾತ್ಯ' ನಾಗಿ ಹಂಪೆಯಲ್ಲಿ ಗಣಪತಿ ದೇವಸ್ಥಾನವನ್ನು ನಿರ್ಮಿಸಿ ಅದಕ್ಕೆ ದತ್ತಿಗಳನ್ನು ಬಿಟ್ಟು ಈ ಶಾಸನವನ್ನು ಬರೆಯಿಸುತ್ತಾನೆ. ಇದು ಕನ್ನಡಿಗರ ಹೆಮ್ಮೆಯ ಶಾಸನವಾಗಿದೆ.

ಹೀಗೆಯೇ ಕನ್ನಡ ನಾಡಿನ ಅನೇಕ ಶಾಸನಗಳು ಕನ್ನಡಿಗರ ಹಿರಿಮೆ, ಶೌರ್ಯ, ಉದಾರತೆ, ದಾನಗುಣ ಮುಂತಾದವುಗಳನ್ನು ಹೆಮ್ಮೆಯಿಂದ ಹೇಳುತ್ತವೆ. ಶ್ರವಣಬೆಳುಗೊಳದ ಬುಕ್ಕರಾಯನ ಗದ್ಯ ಶಾಸನ, ಹೊಯ್ಸಳರ ಸರ್ವಧರ್ಮ ಸಮನ್ವಯತೆಯ ಶಾಸನ, ಲಕ್ಕುಂಡಿಯ ಅತ್ತಿಮಬ್ಬೆ ಶಾಸನ, ಕಪ್ಪೆ ಅರಭಟ್ಟನ ಶಾಸನ ಮುಂತಾದವುಗಳು ನಮ್ಮ ಹೆಮ್ಮೆಯ ಶಾಸನಗಳಾಗಿವೆ.

ಕನ್ನಡ ನಾಡಿನ ಶಾಸನಗಳು ಪ್ರಕಟಗೊಳ್ಳಲು ಕಾರಣರಾದ ಇಬ್ಬರು ಮಹನೀಯರನ್ನು ನಾವೆಂದೂ ಮರೆಯುವಂತಿಲ್ಲ. ಅವರೆಂದರೆ ಜಾನ್ ಫೆಯ್ತ್ ಫುಲ್ ಫ್ಲೀಟ್ (1847–1917) ಮತ್ತು ಬಿ.ಎಲ್.ರೈಸ್ (1837–1927). ಈ ಇಬ್ಬರೂ ಪ್ರಾತಃಸ್ಮರಣೀಯರು. ಕನ್ನಡ ನಾಡನ್ನು ಕುದುರೆಯ ಮೇಲೆ ತಿರುಗಾಡಿ ಶಾಸನಗಳನ್ನು ಪತ್ತೆಹಚ್ಚಿ ಪ್ರಕಟಿಸಿ ನಮಗೆ ಮಹದುಪಕಾರ ಮಾಡಿದ್ದಾರೆ. (>> 3ನೇ ಪುಟಕ್ಕೆ )

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಬನ್ನಿ ಮಕ್ಕಳೇ ಶಾಲೆ ತೆರೆದಿದೆ



ಬನ್ನಿ ಮಕ್ಕಳೇ
ಶಾಲೆ ತೆರೆದಿದೆ
ಹೊಸ ಬಟ್ಟೆ, ಪಠ್ಯ ಪುಸ್ತಕ
ಪಡೆಯಿರಿ;
ನಗುತ ಬನ್ನಿರಿ
ಹಾಲು ಕುಡಿಯಿರಿ
ಪಾಠವನು ಆಟದಿ ಕಲಿಯಿರಿ
ಗುರುಗಳ ಮಾತಿಗೆ
ಕಿವಿಯಾಗಿರಿ;
ಅನುಪಾಲಿಸಿ ಬದುಕನು
ಬದಲಿಸಿಕೊಳ್ಳಿರಿ;
ಹಾಡು ಹೇಳುತ ಕುಣಿದು
ಕುಪ್ಪಳಿಸಿ
ರಜೆಯ ಮರೆಯುತ
ಹೊಸ ಕಲಿಕೆಗೆ
ಮರಳಿರಿ;
ಸಿಹಿಯೂಟದ ಸವಿಯ
ಜೊತೆಗೆ
ಜ್ಞಾನದೂಟವ
ಸವಿಯಿರಿ;
ನೀತಿಕಥೆಗಳ
ಕೇಳುತ
ನೈತಿಕತೆಯನು
ಬೆಳೆಸಿಕೊಳ್ಳಿರಿ;
ಅರಿಯದ ವಿಷಯವ
ಗುರುಗಳೊಂದಿಗೆ
ಚರ್ಚಿಸಿ
ಆತ್ಮವಿಶ್ವಾಸವ
ಪಡೆಯಿರಿ;
ಅಂಕಗಳಿಕೆಯ
ಹಾದಿ ತುಳಿಯದೆ
ಸ್ವತಂತ್ರ
ಬದುಕಿನ ಪಾಠವ
ತಿಳಿಯಿರಿ;
ನೆಮ್ಮದಿಯ ನಾಳೆಗಾಗಿ
ಶಿಕ್ಷಣವೆಂಬ
ಮಂತ್ರವ ಸದಾ
ಪಠಿಸಿರಿ;
ತಂದೆ ತಾಯಿಯರ
ನಂಬಿಕೆಯ ಗೋಡೆಯ
ಬೀಳಿಸದಿರಿ;
ಗುರುಹಿರಿಯರ
ಗೌರವಿಸುತ
ತಮ್ಮ ಆತ್ಮ ಗೌರವ
ಹೆಚ್ಚಿಸಿಕೊಳ್ಳಿರಿ,
ಆಸೆಗಳಿಗೆ ಬಲಿಯಾಗದೇ
ಸ್ವಾಭಿಮಾನದಿ
ಬಾಳಿರಿ;
ಬನ್ನಿ ಮಕ್ಕಳೇ
ಶಾಲೆ ತೆರೆದಿದೆ
ಬನ್ನಿರಿ....

– ಕಾಡಜ್ಜಿ ಮಂಜುನಾಥ

## ಮನೋವೈದ್ಯ ಡಾ.ಅನಿಲ್ ಕುಮಾರ್ ಹೇಳಿಕೆ | ವಿಶ್ವ ಸ್ಕಿಜೋಫ್ರೀನಿಯಾ ದಿನಾಚರಣೆ

# ಹದಿಹರೆಯದವರಲ್ಲಿ ಸ್ಕಿಜೋಫ್ರೀನಿಯಾ ಸಮಸ್ಯೆ ಅಧಿಕ



■ **ಹಂಪಿ ಟೈಮ್ಸ್ ಹೊಸಪೇಟೆ**

ಸಾಮಾನ್ಯವಾಗಿ 15 ರಿಂದ 25 ವರ್ಷ ವಯಸ್ಸಿನ ಅವಧಿಯಲ್ಲಿ ಕಾಣಿಸಿಕೊಳ್ಳುವ ಸ್ಕಿಜೋಫ್ರೀನಿಯಾ ಸಮಸ್ಯೆ ಸೂಕ್ತ ಚಿಕಿತ್ಸೆಯಿಂದ ಪೂರ್ಣ ಗುಣಮುಖ ಸಾಧ್ಯವಾಗಲಿದೆ ಎಂದು ಮನೋವೈದ್ಯ ಡಾ.ಜಿ.ಅನಿಲ್ ಕುಮಾರ್ ಹೇಳಿದರು.

ನಗರದ ಸಂಕ್ಲಾಪುರ ಟಿಎಂಎಇ ಸಂಸ್ಥೆಯ ಸ್ಕೂಲ್ ಮತ್ತು ಕಾಲೇಜು ಆಫ್ ನರ್ಸಿಂಗ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದಿಂದ ಏರ್ಪಡಿಸಿದ್ದ 'ವಿಶ್ವ ಸ್ಕಿಜೋಫ್ರೀನಿಯಾ ದಿನಾಚರಣೆ' ಕಾರ್ಯಕ್ರಮ ದಲ್ಲಿ ಉಪನ್ಯಾಸ ನೀಡಿ ಬುಧವಾರ ಮಾತನಾಡಿದರು. ಈ ಸಮಸ್ಯೆಯಿಂದ ಬಳಲುತ್ತಿರು ವವರು ಬಹುತೇಕವಾಗಿ ಅಸ್ತವ್ಯಸ್ತ ಆಲೋಚನೆ, ಭಾವನೆಗಳ ಏರುಪೇರು, ಅಸಹಜ ಹಾಗೂ ವಿಚಿತ್ರ ಅನುಭವಗಳು, ದೈಹಿಕ ಕ್ರಿಯೆಗಳು ಏರುಪೇರು ಗಳಿಂದಾಗಿ ವಿಚಿತ್ರವಾಗಿ ವರ್ತಿಸುತ್ತಾರೆ. ಇಂತಹ ರೋಗಿಗಳನ್ನು ಮನೆಯಲ್ಲಿಟ್ಟುಕೊಳ್ಳುವುದು ಅಪಾಯ, ಅಸಾಧ್ಯ ಎಂದು ಎಲ್ಲರೂ ಹೇಳುವ ಕಾಲವೊಂದಿತ್ತು. ಅಂತಹ ರೋಗಿಯನ್ನು ಮಾನಸಿಕ ಆಸ್ಪತ್ರೆಗೆ ಸೇರಿಸಿ ಆತನನ್ನು ಜೀವನಪರ್ಯಂತ ಅಲ್ಲೇ ಇಡಬೇಕಾಗಿತ್ತು. ಕಳೆದ ಮೂವತ್ತು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿ ಪರಿಣಾಮಕಾರಿ ಹಾಗೂ ಸರಳ ಔಷಧಿಗಳ ಅವಿಷ್ಕಾರದಿಂದ ರೋಗಿಗಳನ್ನು ಆಸ್ಪತೆಗೆ ಸೇರಿಸದೇ ಅವರನ್ನೂ ಮನೆಯಲ್ಲೇ ಇಟ್ಟು, ಮನೆಯವರ ನೆರವಿನಿಂದ ಚಿಕಿತ್ಸೆ ಪಡೆದು ಫಲಕಾರಿಯಾಗಿ ಕಾಯಿಲೆ ಬೇಗ ವಾಸಿಯಾಗಿ ರೋಗಿ ಪರವಾಲಂಬಿ ,ಯಾಗದೇ ಉದ್ಯೋಗಸ್ಥನಾಗಿ, ಉತ್ತಮ ಪ್ರಜೆಯಾಗಿ ಬದುಕುಬಹುದು. ಇದೀಗ ಉತ್ತಮ ಚಿಕಿತ್ಸಾ ವಿಧಾನಗಳು ಇವೆ ಎಂದರು.

ತಾಲೂಕು ಆರೋಗ್ಯ ಅಧಿಕಾರಿ ಡಾ.ವಿನೋದ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾರ್ವಜನಿಕ ವಾಗಿ 300 ವ್ಯಕ್ತಿಗಳಲ್ಲಿ, ಒಬ್ಬರಿಗೆ ಸ್ಕಿಜೋಫ್ರೀನಿಯಾ ರೋಗ ಕಾಣಿಸಿಕೊಳ್ಳಲಿದೆ. ಪದೇಪದೇ ತೀವ್ರತರವಾದ ಸಂಕಷ್ಟಗಳಿಗೆ ವ್ಯಕ್ತಿ ಸಿಲುಕಿದಾಗ ಕಾಯಿಲೆ ಬರಬಹುದು. ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳ ಜನ, ಶ್ರೀಮಂತರು ಹಾಗೂ ಬಡವರು ಎಲ್ಲಾ ಬುಡಕಟ್ಟಿಗೆ ಸೇರಿದವರು ಸಮಾನವಾಗಿ ಈ ರೋಗಕ್ಕೆ ತುತ್ತಾಗಿದ್ದಾರೆ ಎಂದರು.

ಬಳಿಕ ಕಾರ್ಯಕ್ರಮದಲ್ಲಿ ಟೆಲಿ ಮನಸ್ ಜಾಗೃತಿ ಮೂಡಿಸುವ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಿದರು. ಈ ವೇಳೆ ಟಿಎಂಎಇ ಸಂಸ್ಥೆಯ ನಿರ್ದೇಶಕರಾದ ಟಿ.ಎಂ.ಶಿವಶಂಕರ, ನರ್ಸಿಂಗ್ ಕಾಲೇಜು ಪ್ರಾಂಶುಪಾಲರಾದ ಎನ್.ಸೋಮಶೇಖರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಧರ್ಮನಗೌಡ, ಜಿಲ್ಲಾ ಮಾನಸಿಕ ಆರೋಗ್ಯ ಸಮಾಜ ಕಾರ್ಯಕರ್ತರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಿಬ್ಬಂದಿಯವರು ಮತ್ತು ಟಿಎಂಎಇ ಸಂಸ್ಥೆಯ ಕಾಲೇಜು ಆಫ್ ನರ್ಸಿಂಗ್ ಶಿಕ್ಷಕರು,ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಪೌರಕಾರ್ಮಿಕರಿಗೆ ಆರೋಗ್ಯ ಸಂಜೀವಿನಿ ಜಾರಿಗೊಳಿಸಿ

## ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ರಾಜ್ಯಾಧ್ಯಕ್ಷ ಕೆ.ಪ್ರಬಾಕರ್ ಆಗ್ರಹ



**ರಾಜ್ಯ ಸರಕಾರ ಗ್ರಾಮ ಪಂಚಾಯಿತಿ ನೌಕರರನ್ನು ರಾಜ್ಯ ಸರಕಾರಿ ನೌಕರರನ್ನಾಗಿ ಪರಿಗಣಿಸಿದೆ. ಆದರೆ ಗ್ರಾಮ ಪಂಚಾಯಿತಿಗಿಂತ ಮೇಲ್ದರ್ಜೆಯಲ್ಲಿರುವ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ನೌಕರರನ್ನು ಗುತ್ತಿಗೆ ಆದಾರದ ಮೇಲೆ ದುಡಿಸಿಕೊಳ್ಳುತ್ತಿರುವುದು ಶೋಚನೀಯ ಸಂಗತಿ. ಸರಕಾರ ಇದನ್ನು ಮನಗಂಡು ಶೀಘ್ರ ಸರಕಾರಿ ನೌಕರರೆಂದು ಪರಿಗಣಿಸಬೇಕು.**

**– ಕೆ.ಪ್ರಬಾಕರ್, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಪೌರ ನೌಕರರ ಸಂಘ**

■ **ಹಂಪಿ ಟೈಮ್ಸ್ ಹರಪನಹಳ್ಳಿ**

ಸಾರ್ವಜನಿಕರಿಗೆ ನೇರವಾಗಿ 28 ಸೇವೆಗಳನ್ನು ಒಂದೇ ಸೂರಿನಡಿಯಲ್ಲಿ ಸೇವೆ ಸಲ್ಲಿಸುವ ಇಲಾಖೆ ಯಾವುದಾದರೂ ಇದ್ದರೆ ಅದು ನಮ್ಮ ಪುರಸಭೆ ಪೌರ ನೌಕರರು ಎಂದು ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ರಾಜ್ಯಾಧ್ಯಕ್ಷ ಕೆ.ಪ್ರಬಾಕರ್ ಹೇಳಿದರು.

ಪಟ್ಟಣದ ಪುರಸಭಾ ಕಚೇರಿ ಮುಂಭಾಗ 2ನೇ ದಿನವಾದ ಬುದುವಾರ ತಮ್ಮ ಕೆಲಸಗಳನ್ನು ಮಾಡದೇ ಪೌರ ನೌಕರರು, ಕಛೇರಿ ಕೆಲಸ, ಸ್ವಚ್ಛತಾಕಾರ್ಯ, ನೀರು ಸರಬರಾಜು ಹಾಗೂ ಬೀದಿ ದೀಪ ನಿರ್ವಹಣೆ ಸೇರಿದಂತೆ ವಿವಿಧ ಕಾರ್ಯಗಳನ್ನು ಸ್ಥಗಿತಗೋಳಿಸಿ, ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ, ನಮ್ಮ ಪೌರ ನೌಕರರ ಸಂಘ 1986ರಿಂದ ನೌಕರರ ಏಳಿಗೆಗಾಗಿ ಶ್ರಮಿಸುತ್ತಾ ಬಂದಿದೆ. ಸರಕಾರ ನಮ್ಮ ಪೌರ ನೌಕರರಿಗೆ ಮಲತಾಯಿ ಧೋರಣೆ ತೋರಿಸುತ್ತಿದ್ದು, ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಚ್ಚುತ್ತ ಬಂದಿದೆ. ಪೌರ ನೌಕರರು ಇಂದು ಬೀದಿಗಿಳಿದು ಕಸವನ್ನು ಮಲವನ್ನು ಹೊತ್ತು ನಗರ ಪ್ರದೇಶಗಳನ್ನ ಸ್ವಚ್ಚಗೋಳಿಸುವ ಸಾರ್ವಜನಿಕ ಸೇವೆ ಸಲ್ಲಿಸುವ ನಮಗೆ ಸರಕಾರ ಶೀಘ್ರವಾಗಿ ನ್ಯಾಯ ದೊರಕಿಸ ಬೇಕಿದೆ. ಪೌರ ನೌಕರರು ಎ.ಸಿ ರೂಮಿನಲ್ಲಿ ಕೆಲಸ ನಿರ್ವವಹಿಸುವವರಲ್ಲ. ಬಿಸಿಲು ಗಾಳಿ, ಮಳೆ, ಚಳಿ ಎನ್ನದೇ 365 ದಿನಗಳ ಕಾಲ ಕೆಲಸ ನಿರ್ವಹಿಸುವವರಾಗಿದ್ದಾರೆ. ನಮ್ಮ ನೌಕರರಿಗೆ ಆರೋಗ್ಯ ಸಂಜವೀನಿಯನ್ನು ಶೀಘ್ರವಾಗಿ ಜಾರಿಗೊಳಿಸಬೇಕು.

ಹಿಂದಿನ ಕಾಲದಲ್ಲಿ ಜೀತ ಪದ್ದತಿಯೊಂದಿತ್ತು, ಗೌಡರ, ಶ್ಯಾನಬೋಗರ ಮನೆಯಲ್ಲಿ ಸೆಗಣಿ ಕಸ ಗೂಡಿಸುವ ಪದ್ದತಿಯಂತೆ ಇಂದು ಸರಕಾರ ನಮ್ಮನ್ನು ಹೊರಗುತ್ತಿಗೆ ನೌಕರರೆಂದು ಪರಿಗಣಿಸಿ ಇಂದಿಗೂ ನಮ್ಮನ್ನ ಜೀತ ಪದ್ದತಿಯಂತೆ ಸರಕಾರ ನಮ್ಮನ್ನ ನಡೆಸಿಕೊಳ್ಳುತ್ತಿದೆ. ಹೊರಗುತ್ತಿಗೆ ಆದಾರದ ಮೇಲೆ ಏಜಂಟರ ಮೂಲಕ ನಮಗೆ ಸಿಗುತ್ತಿರುವ ಭತ್ಯೆಯನ್ನು ತಪ್ಪಿಸಿ ನೇರವಾಗಿ ಸರಕಾರವೇ ನಮಗೆ ಭತ್ಯೆಯನ್ನು ಭರಿಸಿ ನಮ್ಮ ಹೋರಾಟಕ್ಕೆ >>4

## ಮೂರು ಹಂತಗಳಲ್ಲಿ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆಯ ಕಾರ್ಯಾವಧಿ ವಿಸ್ತರಣೆ.

■ **ಹಂಪಿ ಟೈಮ್ಸ್ ಹೊಸಪೇಟೆ**

ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಏಕಸದಸ್ಯ ವಿಚಾರಣಾ ಆಯೋಗ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯನ್ನು ಜಿಲ್ಲೆಯಲ್ಲಿ ಮೂರು ಹಂತಗಳಲ್ಲಿನ ಸಮೀಕ್ಷೆ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ತಿಳಿಸಿದ್ದಾರೆ.

ಮೊದಲನೇ ಹಂತದಲ್ಲಿ ಮನೆ–ಮನೆ ಸಮೀಕ್ಷೆ ಮೇ.29 ರವರೆಗೆ, ಮತಗಟ್ಟೆ ಪ್ರದೇಶವಾರು ವಿಶೇಷ ಶಿಬಿರಗಳಲ್ಲಿ ಸಮೀಕ್ಷೆಯನ್ನು ಮೇ.30 ರಿಂದ ಜೂ.1ರವರೆಗೆ ಹಾಗೂ ಸ್ವಯಂ ಘೋಷಣೆ ಜೂ.1 ರವರೆಗೆ ಅವಧಿಯನ್ನು ಮರು ನಿಗಧಿಪಡಿಸಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಜಂಟಿ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ವಿಜಯನಗರ ಹಾಗೂ ವಿಧಾನಸಭಾ ಕ್ಷೇತ್ರವಾರು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಕಂಟ್ರೋಲ್ ರೂಂಗಳನ್ನು ಸ್ಥಾಪಿಸಲಾಗಿದೆ. ಸಮೀಕ್ಷೆಯ ಕುರಿತು ಯಾವುದೇ ಮಾಹಿತಿ ಪಡೆಯಲು ವಿಜಯನಗರ ಜಿಲ್ಲೆಯ ನೋಡಲ್ ಅಧಿಕಾರಿಯಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಕೆ.ಬಿ.ರಾಮಚಂದ್ರಪ್ಪ ಮೊ.9141827465, ವಿಜಯನಗರ ರಮೇಶ್ 8095002829, ಹೊಸಪೇಟೆ ನಜೀಮಾ ಭಾನು 9108777499, ಹಗರಿಬೊಮ್ಮನಹಳ್ಳಿ ಆನಂದ.ವೈ.ಡೊಳ್ಳಿನ 9901980762, ಕೂಡ್ಲಿಗಿ ಶಾಹೇಖಾ ಅಹ್ಮದಿ 8105909630, ಹಡಗಲಿಯ ಜ್ಯೋತಿ 9482608061, ಹರಪನಹಳ್ಳಿ ಗಂಗಪ್ಪ.ಎಸ್.ಆರ್ 9739094433 ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೇ ೩೦ ನೇರ ಸಂದರ್ಶನ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಎಸ್.ಪಿ ವೃತ್ತದ ಪಾರ್ವತಿ ನಗರ ಬಡಾವಣೆಯ 1ನೇ ಮಹಡಿ ಅಭಿಕಾಂಪ್ಲೆಕ್ಸ್‌ನ ಡೋರ್ ನಂ–12ನ ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ನಲ್ಲಿ ಮೇ 30 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 01 ಗಂಟೆಯವರೆಗೆ ನೇರ ಸಂದರ್ಶನವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ಇಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದು, ಈ ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಆಸಕ್ತ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಬೇಕು. ಪುರುಷರಿಗೆ ಮಾತ್ರ ಅವಕಾಶ.

ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ ಮತ್ತು ಸ್ವ–ವಿವರ (ಬಯೋಡೇಟಾ) ಗಳೊಂದಿಗೆ ಅಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.9742718891, 9663263086, 9900827768, 636040809 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅತಿಥಿ ಶಿಕ್ಷಕರ, ಉಪನ್ಯಾಸಕರ ಆಯ್ಕೆ: ಜೂ.01 ಪ್ರವೇಶ ಪರೀಕ್ಷೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಕಾಲೇಜು ಮತ್ತು ಮೌಲನಾ ಆಜಾದ್ ಮಾದರಿ ಮಾದರಿ ಶಾಲೆಗಳಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕ ಮತ್ತು ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಲು ಜೂ.01 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 01 ಗಂಟೆಯವರೆಗೆ ಅಲ್ಲಿಪುರದ ಹೊಸಪೇಟೆ ರಸ್ತೆಯ ಬಿಐಟಿಎಂ ಕಾಲೇಜು ಹತ್ತಿರದ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ನಿಗದಿಪಡಿಸಲಾಗಿದೆ.

ಅತಿಥಿ ಶಿಕ್ಷಕರ ಮತ್ತು ಉಪನ್ಯಾಸಕರ ಹುದ್ದೆಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಕಚೇರಿಗೆ ಭೇಟಿ ನೀಡಿ ಪರೀಕ್ಷೆಯ ಪ್ರವೇಶ ಪತ್ರ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲನಾ ಆಜಾದ್ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ(ದೂ.08392–200125/224) ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆಚ್ಚು ರಕ್ತದಾನ ಮಾಡಿದವರಿಗೆ ಸನ್ಮಾನ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ರಾಜ್ಯ ಶಾಖೆ ಬೆಂಗಳೂರು ವತಿಯಿಂದ ಜೂ.14 ರಂದು "ವಿಶ್ವ ರಕ್ತದಾನಿಗಳ ದಿನಾಚಾರಣೆ" ಅಂಗವಾಗಿ 25 ಕ್ಕಿಂತ ಹೆಚ್ಚು ಬಾರಿ ರಕ್ತದಾನ ಮಾಡಿದವರಿಗೆ ಕರ್ನಾಟಕ ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯಿಂದ ಸನ್ಮಾನ ಮಾಡಲಾಗುತ್ತಿದ್ದು, ಜಿಲ್ಲೆಯ ಅರ್ಹ ರಕ್ತದಾನಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಬಳ್ಳಾರಿ ಶಾಖೆಯ ಕಾರ್ಯದರ್ಶಿ ಎಂ.ಎ.ಷಕೀಬ್ ತಿಳಿಸಿದ್ದಾರೆ.

ಆಸಕ್ತ 25 ಕ್ಕಿಂತ ಹೆಚ್ಚು ಬಾರಿ ರಕ್ತದಾನ ಮಾಡಿದ ವ್ಯಕ್ತಿಗಳು ತಮ್ಮ ರಕ್ತದಾನ ಮಾಡಿದ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಯನ್ನು ನಗರದ ಜಿಲ್ಲಾ ನ್ಯಾಯಾಲಯ ರಸ್ತೆಯ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಬಳ್ಳಾರಿ ಜಿಲ್ಲಾ ಶಾಖೆಗೆ ಮೇ 30 ಸಂಜೆ 05 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬಹುದು. ಈ ಹಿಂದೆ ಸನ್ಮಾನ ಮಾಡಿರುವ ವ್ಯಕ್ತಿಗಳು ಅರ್ಹರಾಗಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಮೊ.9886173411 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಮ್ಮ ಶಾಸನಗಳು - ನಮ್ಮ ಹೆಮ್ಮೆ

**ಎರಡನೆ ಪುಟದಿಂದ**

ಜೆ.ಎಫ್.ಫ್ಲೀಟ್ ಅವರು ಲಂಡನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿ ಸಂಸ್ಕೃತವನ್ನು ಕಲಿತರು. ಐ.ಸಿ.ಎಸ್. ಪರೀಕ್ಷೆಯ ನಂತರ ಮುಂಬಯಿ ಪ್ರಾಂತ್ಯದಲ್ಲಿ ಅಸಿಸ್ಟೆಂಟ್ ಕಮೀಶನರ್ ಆಗಿ ನಂತರ ನ್ಯಾಯಾಧೀಶರಾಗಿ, ಶಿಕ್ಷಣ ಇಲಾಖೆಯಲ್ಲಿ ಇನ್ಸ್ಪೆಕ್ಟರ್ ಆಗಿ, ರಾಜ ತಂತ್ರಜ್ಞರಾಗಿ ಕಾರ್ಯ ನಿರ್ವಹಿಸಿದರು. ಶಾಸನಗಳ ಕುರಿತು ಆಸಕ್ತಿ ಬಂದು ಕನ್ನಡ ಭಾಷೆಯತ್ತ ಆಕರ್ಷಿತರಾಗಿ ಕಲಿತು ಹಳಗನ್ನಡವನ್ನೂ ಅಭ್ಯಾಸ ಮಾಡಿದರು. ಉತ್ತರ ಕರ್ನಾಟಕದ ಬಹಳಷ್ಟು ಲಾವಣಿಗಳನ್ನು ಸಂಗ್ರಹಿಸಿ ಪ್ರಕಟಿಸಿದರು. 1897 ರಲ್ಲಿ ನಿವೃತ್ತರಾಗಿ ಇಂಗ್ಲೆಂಡಿಗೆ ತೆರಳಿದರು. ಸುಮಾರು ಇನ್ನೂರಕ್ಕೂ ಅಧಿಕ ಶಾಸನಗಳ ಕುರಿತಾಗಿ ಲೇಖನಗಳನ್ನು ಬರೆದರು. ಇವರ ಲೇಖನಗಳು ಹಾಗೂ ಗ್ರಂಥಗಳಿಂದ ಇತಿಹಾಸವನ್ನು ಪುನರ್ ರಚಿಸಲಾಯಿತು. ಉತ್ತರ ಕರ್ನಾಟಕದ ಬಹುತೇಕ ಶಾಸನಗಳನ್ನು ಫ್ಲೀಟರು ಸಂಗ್ರಹಿಸಿ ಪ್ರಕಟಿಸಿದರು. ಗುಪ್ತ ಸಾಮ್ರಾಟರ ಕುರಿತು ಇವರು ಶಾಸನಗಳ ಆಧಾರದ ಮೇಲೆ ಹೊಸ ವಿಚಾರಗಳನ್ನು 1878ರಲ್ಲಿ ಪುಸ್ತಕ ರಚಿಸಿ ತಿಳಿಸಿದರು. ಇದು ಅವರಿಗೆ ತುಂಬಾ ಸಂತೋಷವನ್ನು ತಂದ ಶೋಧ ಎಂದು ತಿಳಿಸಿದ್ದಾರೆ. ಗುಪ್ತರ ಯುಗ ಕ್ರಿ.ಶ.320 ರಲ್ಲಿ ಆರಂಭವಾಯಿತು ಎಂಬ ಕ್ರಾಂತಿಕಾರವೂ ನೂತನವೂ ಆದ ವಿಚಾರವನ್ನು ಮೊದಲ ಬಾರಿ ತಿಳಿಸಿದರು. 'ಮೊದಲ ಗುಪ್ತರಾಜರ ಹಾಗೂ ಅವರ ಉತ್ತರಾಧಿಕಾರಿಗಳ ಶಾಸನಗಳು', 'ಪಾಳಿ ಸಂಸ್ಕೃತ, ಹಳಗನ್ನಡ ಶಾಸನಗಳು', 'ಮುಂಬಯಿ ಪ್ರಾಂತ್ಯದ ಕನ್ನಡ ಜಿಲ್ಲೆಗಳ ರಾಜವಂಶಗಳು' ಇವರ ಪ್ರಮುಖ ಕೃತಿಗಳು. ಮುಂಬಯಿ ಪ್ರಾಂತ್ಯವೆಂದರೆ ಬಹುತೇಕ ಉತ್ತರ ಕರ್ನಾಟಕದ ಭಾಗ. ಆರ್.ಸಿ.ಟೆಂಪಲ್ ಇವರೊಂದಿಗೆ ಇಂಡಿಯನ್ ಆಂಟಿಕ್ವೆರಿ ಸಂಪಾದಕರಾಗಿ ಹದಿನಾಲ್ಕರಿಂದ ಇಪ್ಪತ್ತನೆಯ ವರೆಗಿನ ಸಂಪುಟಗಳನ್ನು ಪ್ರಕಟಿಸಿದರು. ಆರ್.ಸಿ.ಟೆಂಪಲ್ ಅವರು ಫ್ಲೀಟರ ಕುರಿತು ಹೀಗೆ ಹೇಳಿದ್ದಾರೆ "ಭಾರತೀಯ ಸಾಮ್ರಾಜ್ಯದ ಪ್ರಾಚೀನ ಹಾಗೂ ಮಧ್ಯಕಾಲೀನ ಚರಿತ್ರೆಯ ನಿಷ್ಕೃಷ್ಟ ಜ್ಞಾನವನ್ನು ಅಪೇಕ್ಷಿಸುವ ವಿದ್ವಾಂಸರ ಭಾವೀ ಪೀಳಿಗೆಗೆ ದಾರಿ ತೋರಿದ ಮೂಲ ಪ್ರವರ್ತಕರಲ್ಲಿ ಮುಂಚೂಣಿಯವರೆಂದು ಫ್ಲೀಟ್ರನ್ನು ನಾನು ಪರಿಗಣಿಸುತ್ತೇನೆ. ಇವರು ಎಲ್ಲವನ್ನೂ ಕುರಿತು ನಿರ್ಲಿಪ್ತವಾದ, ಸಮತೂಕದ ತೀರ್ಪು ಕೊಡಬಲ್ಲವರು." ಫ್ಲೀಟರು ಕನ್ನಡ ಭಾಷೆಯ ಕುರಿತು ಹೀಗೆ ಹೇಳಿದ್ದಾರೆ "ಕನ್ನಡವು ಭಾರತೀಯ ಭಾಷೆಗಳಲ್ಲೆಲ್ಲ ಅತ್ಯಂತ ಮಧುರವಾದುದು ಮತ್ತು ಅಭಿವ್ಯಕ್ತಿ ಶಕ್ತಿಯಲ್ಲಿ ಅತ್ಯಂತ ಶ್ರೀಮಂತವಾದುದು, ಸ್ವೋಪಜ್ಞರಚನೆಯ ಪರಿಮಾಣದಲ್ಲಿ ಮತ್ತು ಮೌಲ್ಯದಲ್ಲಿ ಪ್ರಾಯಶಃ ಅದು ಉಳಿದೆಲ್ಲ ಭಾಷೆಗಳನ್ನೂ ಮೀರಿಸುತ್ತದೆ. ಅವೆಲ್ಲಕ್ಕಿಂತಲೂ ಅದು ಪ್ರಾಚೀನವಾದುದು". ಫ್ಲೀಟರು ಎಂಬ ಬಿಳಿಯ ಕನ್ನಡಿಗರು ನಮ್ಮೆಲ್ಲರಿಗಿಂತ ನಿಜವಾದ ಕನ್ನಡಿಗರು.


ಬಿ.ಎಲ್.ರೈಸರು ದಕ್ಷಿಣ ಕರ್ನಾಟಕದ (ಮೈಸೂರು ರಾಜ್ಯ) ಶಾಸನಗಳನ್ನು ಓದಿ ಪ್ರಕಟಿಸಿದ ಮಹಾನುಭಾವರು. ಡಾ.ಬೆಂಜಮಿನ್ ಲೂಯಿ ರೈಸರನ್ನು ಬಿಳಿಯ ಕನ್ನಡಿಗರು ಎನ್ನುತ್ತಾರೆ. ರೈಸರ ತಂದೆ 'ರೆವೆರೆಂಡ್ ಲೂಯಿ ಬೆಂಜಮಿನ್ ಹೋಲ್ಟ್ ರೈಸ್' ಇಂಗ್ಲೆಂಡಿನಿಂದ ಪಾದ್ರಿಯಾಗಿ ಧರ್ಮಪ್ರಸಾರಕ್ಕೆಂದು ಭಾರತಕ್ಕೆ ಬಂದು ಬೆಂಗಳೂರಿನಲ್ಲಿ ನೆಲೆಸಿದರು. ಬಿ.ಎಲ್.ರೈಸರು ಬೆಂಗಳೂರಿನಲ್ಲಿ ಜನಿಸಿದರು. ತಂದೆ ತಾಯಿ ಇಬ್ಬರೂ ಕನ್ನಡ ಮಾತನಾಡುತ್ತಿದ್ದರು. ಬೆಂಗಳೂರಿನ ಪರಿಸರದ ಭಾಷೆಯೂ ಕನ್ನಡವೇ ಆಗಿತ್ತು ಹಾಗಾಗಿ ಇವರು ಕನ್ನಡಿಗರಂತೆಯೇ ಸಹಜವಾಗಿ ಕನ್ನಡವನ್ನು ಕಲಿತರು. ಬೆಂಗಳೂರಿನಲ್ಲಿ ಪ್ರಾಥಮಿಕ ಅಭ್ಯಾಸದ ನಂತರ ಇಂಗ್ಲೆಂಡಿಗೆ ಉನ್ನತ ವಿದ್ಯಾಭ್ಯಾಸಕ್ಕೆ ತೆರಳಿದರು. ಇಂಗ್ಲೆಂಡಿನಲ್ಲಿ ಬಿ.ಎ ಮುಗಿಸಿ ಕೆಲಕಾಲ ಅಲ್ಲಿಯೇ ಉದ್ಯೋಗಿಗಳಾಗಿದ್ದರು. ನಂತರ 1860ರಲ್ಲಿ ಬೆಂಗಳೂರಿಗೆ ಮರಳಿ ಅಲ್ಲಿ ಪ್ರಾರಂಭವಾಗಿದ್ದ ಸೆಂಟ್ರಲ್ ಹೈಸ್ಕೂಲಿನ ಪ್ರಿನ್ಸಿಪಾಲರಾಗಿ ಉದ್ಯೋಗ ಆರಂಭಿಸಿದರು. ಇಲ್ಲಿಗೆ ಬಂದ ನಂತರ ಕನ್ನಡ, ಸಂಸ್ಕೃತ ಭಾಷಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಪರಿಣತಿ ಗಳಿಸಿದರು. ನಂತರ ಮೈಸೂರು, ಕೊಡಗು ಸಂಸ್ಥಾನಗಳ ಶಾಲಾ ಇನ್ಸ್ಪೆಕ್ಟರಾಗಿ, ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಯಾಗಿ, ಹಂಟರ್ ಆಯೋಗದ ಕಾರ್ಯದರ್ಶಿಯಾಗಿ, ಜನಗಣತಿಯ ಮುಖ್ಯ ಅಧಿಕಾರಿಯಾಗಿ, ಪೋಲೀಸ್ ಇಲಾಖೆಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು. ಮೈಸೂರು ಸರ್ಕಾರ ಹೊಸದಾಗಿ ಆರಂಭಿಸಿದ್ದ 'ಪುರಾತತ್ವ ಇಲಾಖೆ'ಯ ಪ್ರಥಮ ನಿರ್ದೇಶಕರಾಗಿ ಹದಿನಾಲ್ಕು ವರ್ಷ ದುಡಿದರು.

ದಕ್ಷಿಣ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಕುದುರೆಯ ಮೇಲೆ ತಿರುಗಾಡಿ 8869 ಶಾಸನಗಳನ್ನು ಸಂಗ್ರಹಿಸಿದರು. ಹದಿನಾರು ವರ್ಷಗಳ ಕಾಲ ಇದಕ್ಕಾಗಿ ದುಡಿದು ಈ ಎಲ್ಲ ಶಾಸನಗಳನ್ನೂ ಸೇರಿಸಿ 'ಎಪಿಗ್ರಾಫಿಕಾ ಕರ್ನಾಟಕ' ಎಂಬ ಹನ್ನೆರಡು ಸಂಪುಟಗಳನ್ನು ಪ್ರಕಟಿಸಿದರು. ಈ ಕ್ಷೇತ್ರದ ಮಹನೀಯರು ಇವರ ಈ ಗ್ರಂಥಗಳನ್ನು ಕಂಡು ನಿಬ್ಬೆರಗಾದರು. ಕನ್ನಡ ನಾಡಿನ ಹಿರಿಮೆಯನ್ನೂ, ಭಾಷೆಯ ಹಿರಿಮೆಯನ್ನೂ ಸಾರುವ ಈ ಗ್ರಂಥಗಳು ಕನ್ನಡಿಗರು ಹೆಮ್ಮೆಪಡುವಂತೆ ಮಾಡಿದವು. ರೈಸರ ಕನ್ನಡ ಪ್ರೇಮವನ್ನು ಬಣ್ಣಿಸಲಾಗುವುದಿಲ್ಲ.

ಕವಿರಾಜ ಮಾರ್ಗ, ಪಂಪ ಭಾರತ, ಕಾವ್ಯಾವಲೋಕನ, ಪಂಪರಾಮಾಯಣ, ಕರ್ನಾಟಕ ಶಬ್ದಾನುಶಾಸನಂ, ಕರ್ನಾಟಕ ಭಾಷಾ ಭೂಷಣ ಮುಂತಾದ ಅಪ್ರಕಟಿತ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದರು. ಚಂದ್ರಗುಪ್ತ ಮೌರ್ಯನು ಶ್ರವಣಬೆಳುಗೊಳಕ್ಕೆ ಬಂದು ನೆಲೆಸಿದ್ದನ್ನು, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿದ್ದ ಅಶೋಕನ ಶಾಸನಗಳನ್ನು ಮೊದಲು ಪ್ರಕಟಿಸಿದವರೇ ರೈಸರು. ರೈಸರು 1903 ರಲ್ಲಿ ನಿವೃತ್ತರಾಗಿ ಇಂಗ್ಲೆಂಡಿನಲ್ಲಿ ನೆಲೆಸಿದರು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕಾ ಇಲಾಖೆಯ ನಿರ್ದೇಶಕರೂ, ಸಾಹಿತಿಗಳೂ ಆಗಿದ್ದೆ ಎಸ್.ಜಿ. ಶಾಸ್ತ್ರಿಯವರು ಇಂಗ್ಲೆಂಡಿಗೆ 1924 ರಲ್ಲಿ ಹೋಗಿದ್ದಾಗ ಅಲ್ಲಿ ರೈಸರನ್ನು ಭೇಟಿ ಮಾಡುತ್ತಾರೆ. ಶಾಸ್ತ್ರಿಗಳು ಇಂಗ್ಲಿಷ್ ನಲ್ಲೇ ಮಾತನಾಡುತ್ತಾರೆ ಸ್ವಲ್ಪ ಹೊತ್ತು ಇಂಗ್ಲಿಷ್ ನಲ್ಲಿ ಮಾತನಾಡಿದ ರೈಸರು ನಂತರ ಶಾಸ್ತ್ರಿಗಳಿಗೆ ಹೇಳುತ್ತಾರೆ "ಅಯ್ಯಾ ಇನ್ನು ನಾವು ಕನ್ನಡದಲ್ಲಿ ಮಾತನಾಡೋಣ, ಸುಮಧುರವಾದ ಕನ್ನಡ ನುಡಿಯು ಕಿವಿಯ ಮೇಲೆ ಬಿದ್ದು ಬಹಳ ದಿನಗಳಾದವು ಕನ್ನಡವನ್ನು ಕೇಳಲೆಂದೇ ನಾನು ಇಲ್ಲಿಗೆ ಬಂದಿದ್ದೇನೆ. ಕನ್ನಡದಲ್ಲಿ ಮಾತನಾಡಿ". ನಂತರ ಗಂಟೆಗಟ್ಟಲೆ ಕನ್ನಡದಲ್ಲಿ ಮಾತನಾಡಿದರಂತೆ. ರೈಸರು ನಿಜವಾದ ಕನ್ನಡಿಗರು.

ರೈಸರು ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಕೆಲಸವನ್ನು ಏಕಾಂಗಿಯಾಗಿ ಮಾಡಿ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ತಮ್ಮ ಇಡೀ ಜೀವನವನ್ನು ಇದಕ್ಕಾಗಿ ಮುಡಿಪಾಗಿಟ್ಟು ದುಡಿದರು. ಈ ಇಬ್ಬರೂ ಮಹನೀಯರನ್ನು ವಿದೇಶೀಯರು ಎನ್ನಲು ಸಾಧ್ಯವೇ ಇಲ್ಲ. ಇವರದು ನಿಜವಾದ ಕನ್ನಡ ಪ್ರೇಮ. ಇಂತಹ ಪ್ರೀತಿ, ದುಡಿಮೆ, ಪ್ರತಿಭೆ ಇದ್ದಾಗ ಮಾತ್ರ ದೊಡ್ಡ ಕೆಲಸಗಳು ಸಾಧ್ಯವಾಗುತ್ತವೆ.

ನಮ್ಮ ನಾಡು ನುಡಿಯ ಹಿರಿಮೆಯನ್ನು ಅರಿಯಬೇಕೆಂದರೆ ಶಾಸನಗಳ ಮೂಲಕ ನಮ್ಮ ಚರಿತ್ರೆಯನ್ನು ತಿಳಿಯಬೇಕು. ನಮ್ಮ ಪೂರ್ವಜರ ಶ್ರೇಷ್ಠ ಗುಣಗಳನ್ನು ತಿಳಿಯಬೇಕು. ಶಾಸನಗಳಲ್ಲಿ ಬಳಕೆ ಆಗಿರುವ ತ್ರಿಪದಿಗಳು, ವೃತ್ತಗಳು ಕಾವ್ಯಗುಣದಿಂದ ಕೂಡಿದ್ದು ಶಾಸನ ರಚಿಸಿದ ಕವಿಗಳ ಕವಿತಾ ಪ್ರೌಢಿಮೆಯನ್ನು ತಿಳಿಸುತ್ತವೆ. ಇಂತಹ ಶಾಸನಗಳೂ, ಇವುಗಳನ್ನು ರಚಿಸಿದವರೂ ಇವುಗಳನ್ನು ನಮಗೆ ತಲುಪಿಸಿದ ಶಾಸನತಜ್ಞರೂ ಎಲ್ಲರೂ ಅಭಿನಂದನಾರ್ಹರು.



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 28–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.76 ಅಡಿ |
| ಒಳ ಹರಿವು | 2574 ಕ್ಯುಸೆಕ್ |
| ಹೊರ ಹರಿವು | 131 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.680 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.42 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.345 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

29–05–2025 – ಗುರುವಾರ

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆರಿದ್ರಾ |
| ಯೋಗ | : ಶೂಲ |
| ಕರಣ | : ತೈತುಲ |
| ಸೂರ್ಯೋದಯ | : 05:42:38 |
| ಸೂರ್ಯಾಸ್ತ | : 19:06:20 |
| ರಾಹು ಕಾಲ | : 14:05–15:45 |
| ಯಮಘಂಡ ಕಾಲ | : 05:43–07:23 |
| ಗುಳಿಕ ಕಾಲ | : 09:04–10:44 |

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.

Only Admins can Send Messages to this Group

Join with Us

# ನವಜಾತ ಶಿಶುಗಳ ಲಿಂಗಾನುಪಾತದಲ್ಲಿ ದಾವಣಗೆರೆ ರಾಜ್ಯಕ್ಕೆ ಎರಡನೇ ಸ್ಥಾನ

## ಭ್ರೂಣಲಿಂಗ ಪತ್ತೆ ತಡೆಗೆ ಕಟ್ಟುನಿಟ್ಟಿನ ಕ್ರಮವಾಗಬೇಕು । ಎಸಿ ಸಂತೋಷ್ ಪಾಟೀಲ್ ಹೇಳಿಕೆ



■ **ಹಂಪಿ ಟೈಮ್ಸ್ ದಾವಣಗೆರೆ**

ಸಮಾಜದಲ್ಲಿ ಹೆಣ್ಣು ಮತ್ತು ಗಂಡು ಎಂಬ ಲಿಂಗತಾರತಮ್ಯ ಸಲ್ಲದಾಗಿದ್ದು ಪ್ರಸವ ಪೂರ್ವ ಮತ್ತು ನಂತರದಲ್ಲಿ ಹೆಣ್ಣು ಭ್ರೂಣ ಹತ್ಯೆ ಕಾನೂನುಬಾಹಿರ ವಾಗಿದೆ. ಯಾವುದೇ ಕಾರಣಕ್ಕೂ ಇಂತಹ ಕೃತ್ಯಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕೆಂದು ದಾವಣಗೆರೆ ಉಪವಿಭಾಗಾಧಿಕಾರಿ ಸಂತೋಷ್ ಪಾಟೀಲ್ ಸೂಚನೆ ನೀಡಿದರು.

ಅವರು ಬುಧವಾರ ಅವರ ಕಚೇರಿಯಲ್ಲಿ ನಡೆದ ಪಿ.ಸಿ ಮತ್ತು ಪಿಎನ್‌ಡಿಟಿ ಸಮನ್ವಯ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಸವ ಪೂರ್ವದಲ್ಲಿ ಭ್ರೂಣಲಿಂಗಪತ್ತೆ ಮಾಡುವುದು ಕಾನೂನು ಬಾಹಿರವಾಗಿದೆ. ಆದರೂ ಸಹ ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಲಿಂಗಪತ್ತೆಯಂತಹ ಕೃತ್ಯಗಳು ನಡೆಯುತ್ತಿರುವ ವರದಿಯನ್ನು ಗಮನಿಸಲಾಗಿದೆ. ಜಿಲ್ಲೆಯಲ್ಲಿ ಯಾವುದೇ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಲಿಂಗಪತ್ತೆ ಮಾಡಿ ಭ್ರೂಣಹತ್ಯೆಗೆ ಸಹಕಾರ ನೀಡುವಂತಹ ಕೆಲಸವನ್ನು ಯಾವುದೇ ವೈದ್ಯರು ಮಾಡಬಾರದು ಎಂದರು.

ಜಿಲ್ಲೆಯಲ್ಲಿನ ಎಲ್ಲಾ ಸ್ಕ್ಯಾನಿಂಗ್ ಕೇಂದ್ರಗಳು ಜಿಲ್ಲಾ ಮಟ್ಟದ ಸಲಹಾ ಸಮಿತಿಯಿಂದ ಅನುಮೋದನೆ ಪಡೆದುಕೊಂಡು ಪ್ರಾರಂಭಿಸಬೇಕು, ಆದರೆ ಕೆಲವು ಸೆಂಟರ್‌ಗಳಿಗೆ ಅನುಮೋದನೆ ನೀಡಿ ನಂತರ ಸಮಿತಿಯಿಂದ ಘಟನೋತ್ತರ ಅನುಮತಿ ಪಡೆಯುತ್ತಿದ್ದು ಮುಂದಿನ ದಿನಗಳಲ್ಲಿ ಇದಕ್ಕೆ ಅವಕಾಶ ನೀಡುವುದಿಲ್ಲ. ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಕಡ್ಡಾಯವಾಗಿ ರೇಡಿಯೋಲಾಜಿಸ್ಟ್ ವೈದ್ಯರು ಇರಲೇಬೇಕು ಮತ್ತು ಯಾವುದೇ ಕಾರಣಕ್ಕೂ ತಾಂತ್ರಿಕ ಸಹಾಯಕರು ಸ್ಕ್ಯಾನಿಂಗ್ ಮಾಡುವಂತಿಲ್ಲ, ಸ್ಕ್ಯಾನಿಂಗ್ ದರಗಳನ್ನು ಆಯಾ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶನ ಮಾಡಬೇಕೆಂದರು.

**ಅನಿರೀಕ್ಷಿತ ಭೇಟಿ:** ಮುಂದಿನ ದಿನಗಳಲ್ಲಿ ಸ್ಕ್ಯಾನಿಂಗ್ ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತದೆ. ಒಂದು ವೇಳೆ ನಿಯಮಬಾಹಿರವಾಗಿ ಸ್ಕ್ಯಾನಿಂಗ್ ಮಾಡುತ್ತಿದ್ದಲ್ಲಿ, ಅಂತಹ ಕೇಂದ್ರಗಳ ಪರವಾನಗಿ ರದ್ದು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

**ಲಿಂಗಾನುಪಾತದಲ್ಲಿ 2 ನೇ ಸ್ಥಾನ:** ದಾವಣಗೆರೆ ಜಿಲ್ಲೆಯು ನವಜಾತ ಶಿಶುಗಳ ಜನನದ ಲಿಂಗಾನು ಪಾತದಲ್ಲಿ ರಾಜ್ಯದಲ್ಲಿ 2 ನೇಸ್ಥಾನದಲ್ಲಿದೆ. 2024 ರ ಏಪ್ರಿಲ್ ನಿಂದ 2025 ರ ಮಾರ್ಚ್ ವರೆಗಿನ ಅಂಕಿಅಂಶಗಳನ್ವಯ 21938 ನವಜಾತ ಶಿಶುಗಳ ಜನನವಾಗಿದ್ದು ಇದರಲ್ಲಿ 10765 ಹೆಣ್ಣು ಮತ್ತು 11173 ಗಂಡು ಮಗುವಿನ ಜನನವಾಗಿದೆ. ಇದು ರಾಜ್ಯದಲ್ಲಿ 2 ನೇ ಸ್ಥಾನದಲ್ಲಿದ್ದು ಮೊದಲು ಉಡುಪಿ, ರಾಮನಗರ 3 ನೇಸ್ಥಾನ ಮತ್ತು ಶಿವಮೊಗ್ಗ 4 ರಲ್ಲಿದೆ. ಜಿಲ್ಲೆಯಲ್ಲಿ ಸರ್ಕಾರಿ 7 ಮತ್ತು ಖಾಸಗಿ ಮತ್ತು ಇತರೆ ಸಂಸ್ಥೆಗಳಲ್ಲಿ 125 ಸೇರಿ ಒಟ್ಟು 132 ಸ್ಕ್ಯಾನಿಂಗ್ ಕೇಂದ್ರಗಳಿವೆ. ಇದರಲ್ಲಿ ಪ್ರಸ್ತುತ 113 ಕಾರ್ಯನಿರ್ವಹಿಸುತ್ತಿವೆ.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ; ಷಣ್ಮುಖಪ್ಪ, ಮಕ್ಕಳ ತಜ್ಞರು ಹಾಗೂ ಜಿಲ್ಲಾ ಸಲಹಾ ಸಮಿತಿ ಅಧ್ಯಕ್ಷರಾದ ಡಾ; ಎನ್.ಕೆ.ಕಾಳಪ್ಪನವರ್, ಜಿಲ್ಲಾ ಸಲಹಾ ಸಮಿತಿ ನೋಡಲ್ ಅಧಿಕಾರಿ ಡಾ; ರುದ್ರಸ್ವಾಮಿ ಎಂ.ಕೆ, ಹಿಮೋಪೋಲಿಯೋ ಸೊಸೈಟಿ ಡಾ; ಮೀರಾ ಹನಗವಾಡಿ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಪ್ರಸೂತಿ ತಜ್ಞೆ ಡಾ; ಪ್ರವೀಣ ಎಸ್.ಎನ್, ಚಿಗಟೇರಿ ಆಸ್ಪತ್ರೆ ರೇಡಿಯೋಲಾಜಿಸ್ಟ್ ಡಾ; ಸುಮಿತ್ರ ಎಲ್ ಉಪಸ್ಥಿತರಿದ್ದರು.

# ರಕ್ತದಾನದಿಂದ ಜೀವ ಉಳಿಸಬಹುದು : ಡಿಹೆಚ್ಒ

■ **ಹಂಪಿ ಟೈಮ್ಸ್ ಬಳ್ಳಾರಿ**

ಸ್ವಯಂ ಪ್ರೇರಿತ ರಕ್ತದಾನದಿಂದ ಜನರ ಜೀವ ಉಳಿಸಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಬುಧವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರಕ್ತ ಸುರಕ್ಷತಾ ಟಾಸ್ಕ್ ಫೋರ್ಸ್ ಸಮಿತಿ ಹಾಗೂ ಏಡ್ಸ್ ನಿಯಂತ್ರಣ ಘಟಕ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ದೇವಿನಗರ, ಯೋಗ ತರಬೇತಿ ಕೇಂದ್ರ ಪಾರ್ವತಿನಗರ, ಎಸ್‌ಪಿ ಸರ್ಕಲ್ ಆಟೋ ಚಾಲಕರ ಸಂಘ ಇವರ ಸಹಯೋಗದಲ್ಲಿ ಸ್ಪಂದನ ಬ್ಲಡ್‌ಬ್ಯಾಂಕ್ ವತಿಯಿಂದ ದೇವಿನಗರದಲ್ಲಿ ಹಮ್ಮಿಕೊಂಡಿದ್ದ ಸ್ವಯ ಪ್ರೇರಿತ ರಕ್ತದಾನ ಶಿಬಿರದಲ್ಲಿ



ದಾನ ಮಾಡಿದ ರಕ್ತದಾನಿಗಳಿಗೆ ಅಭಿನಂದಿಸಿ ಮಾತನಾಡಿದರು. ಜೀವಂತವಿರುವಾಗಲೇ ತಮ್ಮ ದೇಹದಿಂದ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಜಾತಿ ಧರ್ಮಗಳ ಎಲ್ಲೆಯಿಲ್ಲದೆ, ಗಂಡು–ಹೆಣ್ಣು ಎಂಬ ಭೇದವಿಲ್ಲದೆ ದಾನ ಮಾಡಬಹುದಾದ ಮತ್ತು ಇನ್ನೊಬ್ಬರ ಜೀವ ಉಳಿಸಲು ಸಹಾಯಕ ವಾಗುವುದೆಂದರೆ ಅದು ಮನುಷ್ಯನ ರಕ್ತವಾಗಿದೆ ಎಂದರು.

ಒಬ್ಬರಿಂದ ಪಡೆದ ರಕ್ತವನ್ನು ಹೋಲ್ ಬ್ಲಡ್, ಪ್ಲೇಟ್‌ಲೆಟ್ಸ್, ಪ್ಲಾಸ್ಮಾ, ಪ್ಯಾಕಡ್ ಸೆಲ್ಸ್, ಎಂಬ ನಾಲ್ಕು ರೂಪದಲ್ಲಿ ವ್ಯಕ್ತಿಯ ಜೀವ ಉಳಿಸಲು ಬಳಸಬಹುದಾಗಿದ್ದು, ಪ್ರಸ್ತುತ ದಿನಗಳಲ್ಲಿ ರಕ್ತದ ಅವಶ್ಯಕತೆಯಿರುವುದರಿಂದ 18 ವರ್ಷ ಮೇಲ್ಪಟ್ಟ ಆರೋಗ್ಯವಂತ ಪ್ರತಿಯೊಬ್ಬರೂ ರಕ್ತದಾನ ಮಾಡುವ ಮೂಲಕ ಹಲವಾರು ಜನರ ಜೀವ ಉಳಿಸುವ ಕಾರ್ಯದಲ್ಲಿ ಭಾಗಿಯಾಗಬೇಕು. ಅಪಘಾತಗಳು, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭಕ್ಕಾಗಿ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಥ್ಯಾಲಿಸೀಮಿಯಾ, ಹಿಮೋಫಿಲಿಯಾ ಮುಂತಾದ ರೋಗಿಗಳ ಜೀವವನ್ನು ಉಳಿಸಲು ಸಹಾಯಕವಾಗಲಿದೆ ಎಂದರು. ಜಿಲ್ಲಾ ರೋಗವಾಹಕಆಶ್ರೀತರೋಗಗಳನಿಯಂತ್ರಣಾದಿಕಾರಿ ಡಾ.ಆರ್.ಅಬ್ದುಲ್ಲಾ ಇತರರಿದ್ದರು.

# ಅಲ್ಪಸಂಖ್ಯಾತ ಕಾನೂನು ಪದವೀಧರರಿಗೆ ಶಿಷ್ಯವೇತನಕ್ಕೆ ಅರ್ಜಿ ಅಹ್ವಾನ.


■ **ಹಂಪಿ ಟೈಮ್ಸ್ ಹೊಸಪೇಟೆ**

2025–26 ಸಾಲಿಗೆ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಕಾನೂನು ಪದವಿಧರರಿಗೆ ವೃತ್ತಿ ತರಬೇತಿ ಶಿಷ್ಯವೇತನ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗುಡಪ್ಪ ಜಗಲಿಕೊಪ್ಪ ತಿಳಿಸಿದ್ದಾರೆ.

ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಮತ್ತು ಪಾರ್ಸಿ ಸಮುದಾಯಕ್ಕೆ ಸೇರಿರಬೇಕು. ಕುಟುಂಬದ ವಾರ್ಷಿಕ ಆದಾಯ 3.50 ಲಕ್ಷ ಮೀರಿರಬಾರದು. ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೋಂದಾಯಿಸರಬೇಕು. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕಡೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು 30 ವರ್ಷದೊಳಗಿರಬೇಕು. ಇತರೆ ಷರತ್ತುಗಳ ಅನ್ವಯ ಭರ್ತಿ ಮಾಡಿದ ಅರ್ಜಿಯನ್ನು ಜೂ.25 ರೊಳಗಾಗಿ ಹೊಸಪೇಟೆಯ ಅಂಬೇಡ್ಕರ್ ಸರ್ಕಲ್ ಹತ್ತಿರ ಇರುವ ಎಸ್‌ಎಮ್‌ಎಸ್‌ಕೆ ಪ್ಲಾಜಾ ಗುಗ್ರೀ ನರ್ಸಿಂಗ್ ಹೋಮ್ ಪಕ್ಕದಲ್ಲಿರುವ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಚೇರಿಗೆ ಸಲ್ಲಿಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆ ಕಾಣೆ : ಪ್ರಕರಣ ದಾಖಲು.

■ **ಹಂಪಿ ಟೈಮ್ಸ್ ಹೊಸಪೇಟೆ**



ಹೊಸಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸುಮಾರು 30 ವರ್ಷದ ಸಿದ್ದಮ್ಮ, ಕೂಡ್ಲಿಗಿ ತಾಲೂಕಿನ ಗೊಲ್ಲರಹಟ್ಟಿ ಗ್ರಾಮದ ಮಹಿಳೆ ಕಾಣೆಯಾಗಿರುವ ಕುರಿತು ಹೊಸಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ವ್ಯಕ್ತಿ ಚಹರೆ:** ತೆಳುವಾದ ಮೈಕಟ್ಟು, ಗೋಧಿ ಮೈಬಣ್ಣ, ಕೋಲುಮುಖ, 4 ಅಡಿ ಎತ್ತರದ ಮಹಿಳೆ, ಕನ್ನಡ ಮಾತನಾಡುತ್ತಾಳೆ, ಹಸಿರು ಬಣ್ಣದ ಸೀರೆ ಮತ್ತು ಕುಪ್ಪಸ ಧರಿಸಿರುತ್ತಾರೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹೊಸಹಳ್ಳಿ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೌರಕಾರ್ಮಿಕರಿಗೆ ಆರೋಗ್ಯ ಸಂಜೀವಿನಿ ಜಾರಿಗೊಳಿಸಿ

ಮೂರನೇ ಪುಟದಿಂದ

ನ್ಯಾಯ ದೊರಕಿಸಿ ಕೊಡಬೇಕೆಂದರು. ಒಂದು ವೇಳೆ ಈ ನಮ್ಮ ಹೋರಾಟವನ್ನು ಸರಕಾರ ಪರಿಗಣಿಸಿ ನ್ಯಾಯ ದೊರಕಿಸದೇ ಹೋದಲ್ಲಿ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಸಲಾಗುವುದು.

ಕರ್ನಾಟಕ ರಾಜ್ಯ ಪೌರ ನೌಕರರ ಜಂಟಿ ಕಾರ್ಯದರ್ಶಿ ಯು. ರಾಘವೇಂದ್ರ ಪ್ರಸಾದ್, ಜಿಲ್ಲಾದ್ಯಕ್ಷ ಒಬಣ್ಣ, ರಾಜ್ಯ ಪರಿಷತ್ ಸದಸ್ಯರಾದ ಸುಂಕಣ್ಣ, ಬಾಗಲಕೋಟೆ ಜಿಲ್ಲಾದ್ಯಕ್ಷ ಚಂದ್ರಶೇಖರ ಮೇಟಿ, ಪೌರ ಕಾರ್ಮಿಕರ ಸಂಘದ ಅದ್ಯಕ್ಷ ಡಿ.ನಾಗರಾಜ ಮಾತನಾಡಿದರು.

ಈ ವೇಳೆ ಉಪಾದ್ಯಕ್ಷ ಟಿ.ಎನ್.ರಾಜು, ಕಾರ್ಯದರ್ಶಿ ಪಿ.ಮಂಜುನಾಥ, ಖಜಾಂಚಿ ಪಿ.ಉಚ್ಚಂಗ್ಯೆಪ್ಪ, ಸಂಘಟನಾ ಕಾರ್ಯದರ್ಶಿ ವ್ಯವಸ್ಥಾಪಕ ಅಶೋಕ, ಇಂಜಿನಿಯರ್ ಸಿದ್ದೇಶ್ವರಸ್ವಾಮಿ, ಕಂದಾಯಧಿಕಾರಿ ಪ್ರಭು, ಪರಿಸರ ಅಭಿ ಯಂತರು ಅಂಬರೀಶ್, ಬಿ.ಮಂಜುನಾಥ, ಮಲ್ಲಮ್ಮ, ಶ್ಯಾಮ ರಾಜ್, ಸಂತೋಷ, ಉಚ್ಚಂಗ್ಯೆಪ್ಪ, ಮಾಜಿ ಅದ್ಯಕ್ಷ ಡಿ.ಲಿಂಗಪ್ಪ, ಗುರು, ರಮೇಶ್, ಬಂಡಿರಾಮಪ್ಪ, ದಂಡ್ಯೆಪ್ಪ, ಜಬೀಲ್, ಎಂ. ಚಂದ್ರಪ್ಪ, ಅನುಸೂಯಮ್ಮ, ಕೆ.ಜ್ಯೋತಿ, ಲಲಿತಮ್ಮ, ಶೋಭ, ಬಸಮ್ಮ, ಪರಶುರಾಮಪ್ಪ, ಕೆ.ಸಂತೋಷ್ ಕುಮಾರ್, ಪರಶುರಾಮ, ಚಿತ್ರಪ್ಪ ಮಾಳಗಿ, ಎಂ.ಡಿ.ಮನ್ಸೂರ್, ಸೀರಾಜ್, ಪಿ.ಮಂಜುನಾಥ ಪಾಟೀಲ್, ಸೇರಿದಂತೆ ಆನೇಕರು ಹಾಜರಿದ್ದರು.

# ತೋಟಗಾರಿಕೆ ರೈತರಿಗೆ ಸಹಾಯ ಧನ : ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2025–26ನೇ ಸಾಲಿನ ಹೊಸಪೇಟೆ ತೋಟಗಾರಿಕೆ ಇಲಾಖೆ ವತಿಯಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ), ಮತ್ತು ವಿವಿಧ ಯೋಜನೆಗಳಡಿಯಲ್ಲಿ ಅರ್ಹ ಫಲಾನುಭವಿಗಳ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅಡಿಯಲ್ಲಿ ಅಂಗಾಂಶ ಬಾಳೆ, ದಾಳಿಂಬೆ, ಪಪ್ಪಯಾ, ಡ್ರಾಗನ್ ಹಣ್ಣು ಪ್ರದೇಶ ವಿಸ್ತರಣೆ, ತೋಟಗಾರಿಕೆ ಬೆಳೆಗಳಲ್ಲಿ ಪ್ಲಾಸ್ಟಿಕ್ ಹೊದಿಕೆ, ಕೊಲ್ಡ್ ಸ್ಟೊರೇಜ್, ಮಿನಿ ಟ್ರಾಕ್ಟರ್(20 ಹೆಚ್‌ಪಿ ಒಳಗೆ) ಮತ್ತು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ಶೇ.90 ಸಹಾಯ ಧನ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ದಾಳಿಂಬೆ, ಡ್ರಾಗನ್ ಹಣ್ಣು ಪ್ರದೇಶ ವಿಸ್ತರಣೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬಹು ವಾರ್ಷಿಕ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ದಾಳಿಂಬೆ, ಸೀಬೆ, ತೆಂಗು, ಅಂಗಾಂಶ ಬಾಳೆ, ಪಪ್ಪಾಯ, ನುಗ್ಗೆ, ಗುಲಾಬಿ) ಈ ಯೋಜನೆಗಳಿಗೆ ಕೂಡಲೇ ತೋಟಗಾರಿಕೆ ಇಲಾಖೆ ಹೊಸಪೇಟೆ ಸಂಪರ್ಕಿಸಿ ಅರ್ಜಿಸಲ್ಲಿಸಿ ನಿಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ರೈತರು ಆಯಾ ಹೋಬಳಿಯ ತೋಟಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿ.ಪಂ.), ಹೊಸಪೇಟೆ, 8310291867, ರೈತ ಸಂಪರ್ಕ ಕೇಂದ್ರ ಹೊಸಪೇಟೆ ಮೊ.9164297220, ಮರಿಯಮ್ಮನಹಳ್ಳಿ ಮೊ.7204888978, ರೈತ ಸಂಪರ್ಕ ಕೇಂದ್ರ ಕಮಲಾಪುರ ಮೊ.8123465548ಕರೆಮಾಡಿಮಾಹಿತಿಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

HAMPI TIMES
Print & Digital Kannada Daily

ಪರಿಸರ ಬೆಳೆಸಿ ಮಕ್ಕಳ ಭವಿಷ್ಯಕ್ಕೆ ಬೆಳಕಾಗಿ

ಪರಿಸರ ಉಳಿಸಿ ಬೆಳೆಸೋಣ ಅಭಿಯಾನಕ್ಕೆ ಪಾಲಕರು ಕೈಜೋಡಿಸಿ, ಭವಿಷ್ಯದ ಮಕ್ಕಳಿಗೆ ಉತ್ತಮ ಆರೋಗ್ಯ ನೀಡಿ

ಶಾಲೆ ಪ್ರವೇಶಿಸುವ ನಿಮ್ಮ ಮಗುವಿನ ಹೆಸರಿನಲ್ಲೊಂದು ಸಸಿ ನೆಡಿಸಿ,
ಹಂಪಿ ಟೈಮ್ಸ್ ಗೆ ಫೋಟೋ ಕಳುಹಿಸಿ...



ನೂತನವಾಗಿ ಶಾಲೆ ಪ್ರವೇಶಿಸುತ್ತಿರುವ ಮಗುವಿನಿಂದ ಒಂದು ಸಸಿ ನೆಡಿಸಿ. ಆ ಸಸಿಗೆ ಆ ಮಗುವಿನ ಹೆಸರನ್ನೇ ನಾಮಕರಣ ಮಾಡಿ, ಆ ಮಧುರಕ್ಷಣವನ್ನು ಕ್ಯಾಮರಾದಲ್ಲಿ ಸೆರೆಹಿಡಿದು, ಮಗುವಿನ ಮತ್ತು ಸಸಿಯ ಹೆಸರು, ಶಾಲೆಯ ಹೆಸರು, ಊರು, ಜಿಲ್ಲೆ ನಮೂದಿಸಿ ಕಳುಹಿಸಿಕೊಡಿ.
ಆಯ್ದ ಫೋಟೋಗಳನ್ನು
**ಹಂಪಿ ಟೈಮ್ಸ್‌ನಲ್ಲಿ ಪ್ರಕಟಿಸಲಾಗುವುದು.**



SCAN & READ
HAMPI TIMES E-PAPER

ಫೋಟೋಗಳನ್ನು ಈ ಕೆಳಗಿನ ಇಮೇಲ್/ವಾಟ್ಸಪ್ ನಂಬರಿಗೆ ಸಸಿ ನೆಟ್ಟ ದಿನವೇ ಕಳುಹಿಸಿ

www.hampitimes.com / https://epaper.hampitimes.com
Email: hampitimes@gmail.com

Contact for Advertisement place : 94486 33038